# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಫೆಬ್ರವರಿ 25, 2022

ಸಂಪುಟ : 48 ಸಂಚಿಕೆ : 286 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


# ಉಕ್ರೇನ್‌ಗೆ ನುಗ್ಗಿದ ರಷ್ಯಾ ಸೈನ್ಯ

## ಬೇರೆ ದೇಶಗಳು ಮಧ್ಯ ಪ್ರವೇಶಿಸದಂತೆ ರಷ್ಯಾ ಅಧ್ಯಕ್ಷ ಪುತಿನ್ ಎಚ್ಚರಿಕೆ

ಕೀವ್, ಫೆ. 24 - ಅಂತರರಾಷ್ಟ್ರೀಯ ಸಮುದಾಯದ ಖಂಡನೆಗೆ ಕಿವಿಗೊಡದ ರಷ್ಯಾ, ಉಕ್ರೇನ್ ಮೇಲೆ ತನ್ನ ಸೈನ್ಯವನ್ನು ನುಗ್ಗಿಸಿದೆ. ಈ ದಾಳಿಯಲ್ಲಿ ಇತರೆ ದೇಶಗಳು ಮಧ್ಯ ಪ್ರವೇಶಿಸಿದರೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುತಿನ್ ಎಚ್ಚರಿಸಿದ್ದಾರೆ.

ರಷ್ಯಾದ ಸೈನಿಕ ವಾಹನಗಳು ತನ್ನ ಗಡಿಯಲ್ಲಿ ನುಗ್ಗುತ್ತಿರುವ ಹಾಗೂ ರಾಜಧಾನಿ ಕೀವ್, ಪೂರ್ವದ ಖಾರ್ಕಿವ್ ಮತ್ತು ಪಶ್ಚಿಮ ಒಡೆಸಾ ನಗರಗಳಲ್ಲಿ ಭಾರೀ ಸ್ಫೋಟಗಳು ಸಂಭವಿಸುತ್ತಿರುವ ಚಿತ್ರಗಳನ್ನು ಉಕ್ರೇನ್ ಗಡಿ ಭದ್ರತಾ ಪಡೆ ಬಿಡುಗಡೆ ಮಾಡಿದೆ. ಉಕ್ರೇನ್ ಗಡಿಯ ಐದು ಕಿ.ಮೀ. ವರೆಗೆ ರಷ್ಯಾದ ಸೈನ್ಯ ನುಗ್ಗಿದೆ ಎನ್ನಲಾಗಿದೆ.

ಕೆಲವೇ ಗಂಟೆಗಳಲ್ಲಿ ಉಕ್ರೇನ್‌ನ ಇಡೀ ವೈಮಾನಿಕ ರಕ್ಷಣೆಯನ್ನು ಧ್ವಂಸಗೊಳಿಸಿರುವುದಾಗಿ ರಷ್ಯಾದ ಸೈನಿಕ ಪಡೆಗಳು ಹೇಳಿಕೊಂಡಿವೆ. ಉಕ್ರೇನ್ ಜನರು ಕೆಲ ನಗರಗಳನ್ನು ತೊರೆದಿದ್ದಾರೆ. ಉಕ್ರೇನ್ ವಾಯು ಪ್ರದೇಶ ಸಂಘರ್ಷ ಪೀಡಿತ ಎಂದು ಯುರೋಪ್ ಅಧಿಕಾರಿಗಳು ಘೋಷಿಸಿದ್ದಾರೆ. ದೂರಗಾಮಿ ಪರಿಣಾಮ ಬೀರುವ, ಜಾಗತಿಕ ಹಣಕಾಸು (2ನೇ ಪುಟಕ್ಕೆ)



ರಷ್ಯಾ ದಾಳಿ ನಂತರ ಉಕ್ರೇನ್ ಮಹಿಳೆ ಪ್ರಾರ್ಥನೆ



## ಜಾಗತಿಕ ಆರ್ಥಿಕತೆಗೆ ಯುದ್ಧಾಘಾತ

### ತೈಲ ಬೆಲೆ ಏರಿಕೆ, ಹಣದುಬ್ಬರದ ಜೊತೆಗೆ ಆಹಾರ ಸಂಕಷ್ಟ

ವಾಷಿಂಗ್ಟನ್, ಫೆ. 24 - ಈಗಾಗಲೇ ಕೊರೊನಾದಿಂದ ತತ್ತರಿಸಿರುವ ಜಾಗತಿಕ ಆರ್ಥಿಕ ವ್ಯವಸ್ಥೆಗೆ ಉಕ್ರೇನ್ ಮೇಲೆ ರಷ್ಯಾ ಸಾರಿರುವ ಯುದ್ಧ ಆಘಾತ ನೀಡಿದೆ. ಹಣದುಬ್ಬರ ಹೆಚ್ಚಾಗುವ, ಮಾರುಕಟ್ಟೆಯಲ್ಲಿ ತಲ್ಲಣವಾಗುವ ಜೊತೆಗೆ, ವಿಶ್ವದಾದ್ಯಂತ ಆರ್ಥಿಕ ಸಮಸ್ಯೆಗಳು ಉಲ್ಬಣಿಸುವ ಸೂಚನೆಗಳು ದೊರೆತಿವೆ.

ರಷ್ಯಾ ಹಾಗೂ ಉಕ್ರೇನ್ ದೇಶಗಳ ಜಾಗತಿಕ ಜಿ.ಡಿ.ಪಿ.ಯ ಪಾಲು ಶೇ.2ರಷ್ಟು ಮಾತ್ರವಿದೆ. ಕೆಲ ದೇಶಗಳು ಕೊರೊನಾ ನಂತರ ತ್ವರಿತವಾಗಿ ಚೇತರಿಸಿಕೊಂಡಿವೆ. ಆದರೂ, ಯುದ್ಧದಿಂದ ಆರ್ಥಿಕತೆಗೆ ಆಗುವ ಹಾನಿ ಕಡೆಗಣಿಸಲಾಗದು.

ರಷ್ಯಾ ವಿಶ್ವದಲ್ಲೇ ಮೂರನೇ ಅತಿ ದೊಡ್ಡ ಪೆಟ್ರೋಲಿಯಂ ಉತ್ಪಾದಿಸುವ ದೇಶವಾಗಿದೆ. ನೈಸರ್ಗಿಕ ಅನಿಲ ರಫ್ತಿನಲ್ಲಿ ರಷ್ಯಾ ಮುಂಚೂಣಿಯಲ್ಲಿದೆ. ಉಕ್ರೇನ್ (2ನೇ ಪುಟಕ್ಕೆ)

### ಷೇರುಪೇಟೆ, ರೂಪಾಯಿ ಕುಸಿತ ಬಂಗಾರ, ಕಚ್ಚಾ ತೈಲ ಬೆಲೆ ಏರಿಕೆ

ನವದೆಹಲಿ, ಫೆ. 24 - ಉಕ್ರೇನ್ ಮೇಲೆ ರಷ್ಯಾ ದಾಳಿ ನಡೆಸಿದ ನಂತರ ಭಾರತದಲ್ಲಿ ಷೇರು ಪೇಟೆ ಕುಸಿದಿದೆ. ಡಾಲರ್ ಎದುರು ರೂಪಾಯಿ ಕುಸಿದಿದ್ದರೆ, ಬಂಗಾರ ಮತ್ತು ಕಚ್ಚಾ ತೈಲದ ಬೆಲೆ ಏರಿಕೆಯಾಗಿದೆ. ಮುಂಬೈ ಷೇರು ಸೂಚ್ಯಂಕದಲ್ಲಿ 1,700 ಅಂಕಗಳ ಕುಸಿತವಾಗಿದೆ. ಮಾರುಕಟ್ಟೆ ಮೌಲ್ಯದಲ್ಲಿ 8 ಲಕ್ಷ ಕೋಟಿ ರೂ.ಗಳ ಕುಸಿತವಾಗಿದೆ. ಡಾಲರ್ ಎದುರು ರೂಪಾಯಿ ಮೌಲ್ಯ 74 ಪೈಸೆಗಳಷ್ಟು ಕುಸಿದು 75.02 ರೂ.ಗಳಿಗೆ ತಲುಪಿದೆ. ಬಂಗಾರದ ಬೆಲೆಗಳು ಏರುಮುಖವಾಗಿವೆ. ಈ (2ನೇ ಪುಟಕ್ಕೆ)

## ಉಕ್ರೇನ್‌ನಲ್ಲಿ ದಾವಣಗೆರೆ ವಿದ್ಯಾರ್ಥಿಗಳು ಅತಂತ್ರ

ದಾವಣಗೆರೆ, ಫೆ. 24 - ದಾವಣಗೆರೆ ಹಾಗೂ ಸುತ್ತಲಿನ ನೂರಾರು ವಿದ್ಯಾರ್ಥಿಗಳು ಉಕ್ರೇನ್‌ನಲ್ಲಿ ಉನ್ನತ ವ್ಯಾಸಂಗ ಮಾಡುತ್ತಿದ್ದಾರೆ. ಉಕ್ರೇನ್ ಮೇಲೆ ರಷ್ಯಾ ದಾಳಿ ಆರಂಭಿಸುತ್ತಿರುವುದು ಇವರಲ್ಲಿ ಕಳವಳ ತಂದಿದೆ.

ದಾವಣಗೆರೆಯ ಕನಿಷ್ಠ ಹತ್ತು ವಿದ್ಯಾರ್ಥಿಗಳು ಉಕ್ರೇನ್‌ನಲ್ಲಿ ವೈದ್ಯಕೀಯ ವ್ಯಾಸಂಗದಲ್ಲಿ ತೊಡಗಿದ್ದಾರೆ ಎಂದು ಇಬ್ಬರು ಪೋಷಕರು ತಿಳಿಸಿದ್ದಾರೆ. ಯುದ್ಧದ ಆರಂಭಕ್ಕೂ ಮೊದಲೇ ಭಾರತಕ್ಕೆ ಮರಳಲು ಕೆಲ ವಿದ್ಯಾರ್ಥಿಗಳು ಪ್ರಯತ್ನ ನಡೆಸಿದ್ದರು. ಆದರೆ, ಅವರ ಪ್ರಯತ್ನ ಫಲ ನೀಡಿಲ್ಲ.

**ಚೆರ್ನಿವ್‌ಟ್ಸಿ, ಕಾರ್ಖೀವ್ ಮುಂತಾದ ಕಡೆ ಇರುವ ದಾವಣಗೆರೆ ಮೂಲದ ವಿದ್ಯಾರ್ಥಿಗಳಿಗೆ ಆತಂಕ**

ದಾವಣಗೆರೆ, ಹರಿಹರ, ರಾಣೇಬೆನ್ನೂರು ಸುತ್ತಲಿನ ಪ್ರದೇಶಗಳ ನೂರಾರು ವಿದ್ಯಾರ್ಥಿಗಳು ಉಕ್ರೇನ್‌ನ ಹಲವು ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಇವರಲ್ಲಿ ಬಹುತೇಕರು ವೈದ್ಯಕೀಯ ವಿದ್ಯಾರ್ಥಿಗಳೇ ಆಗಿದ್ದಾರೆ ಎಂದು ವಿದ್ಯಾರ್ಥಿಗಳ ಪೋಷಕರು ತಿಳಿಸಿದ್ದಾರೆ.

ಗುರುವಾರ ವಿದ್ಯಾರ್ಥಿಗಳನ್ನು ಎರಡು ಬಸ್‌ಗಳಲ್ಲಿ ವಾಪಸ್ ಕರೆ ತರುವ ಪ್ರಯತ್ನ ನಡೆಸುವಾಗ ಉಕ್ರೇನ್ (2ನೇ ಪುಟಕ್ಕೆ)

### ಮಾತನಾಡುವಾಗಲೇ ಸಿಡಿದ ಬಾಂಬ್

ನಿನ್ನೆ ಕಾರ್ಖೀವ್ ನಗರದಲ್ಲಿ ಬಾಂಬ್ ದಾಳಿ ನಡೆಸಲಾಗಿತ್ತು. ಗುರುವಾರ ಮಗನ ಜೊತೆ ಮಾತನಾಡುವಾಗಲೇ ಬಾಂಬ್ ಸಿಡಿದ ಸದ್ದು ಕೇಳಿಸಿತು ಎಂದು ಕೆ.ಬಿ. ರುದ್ರೇಶ್ ಹೇಳಿದ್ದಾರೆ. ಬಾಂಬ್ ದಾಳಿಯ ಹಿನ್ನೆಲೆಯಲ್ಲಿ ಎಚ್ಚರಿಕೆಯಿಂದ ಇರುವಂತೆ ಸೂಚನೆ ನೀಡಲಾಗಿದೆ. ಸುರಕ್ಷಿತ ಸ್ಥಾನಗಳಲ್ಲಿ ಇರುವ ಬಗ್ಗೆ ತಿಳಿಸಲಾಗಿದೆ. ಪರಿಸ್ಥಿತಿ ಬಿಗಡಾಯಿಸುತ್ತಿರುವ ಹಿನ್ನೆಲೆಯಲ್ಲಿ, ಸರ್ಕಾರ ತ್ವರಿತವಾಗಿ ಕ್ರಮ ತೆಗೆದುಕೊಂಡು ವಿದ್ಯಾರ್ಥಿಗಳನ್ನು ವಾಪಸ್ ಕರೆ ತರಬೇಕು ಎಂದವರು ಮನವಿ ಮಾಡಿಕೊಂಡಿದ್ದಾರೆ.

## ಇಂದು ಮಹಾನಗರ ಪಾಲಿಕೆ ಮೇಯರ್ ಚುನಾವಣೆ

ದಾವಣಗೆರೆ, ಫೆ. 24- ಮಹಾನಗರ ಪಾಲಿಕೆಯ ಮೇಯರ್ ಹಾಗೂ ಉಪ ಮೇಯರ್ ಸ್ಥಾನಕ್ಕೆ ಇಂದು ಚುನಾವಣೆ ನಡೆಯಲಿದ್ದು, ಮೂರನೇ ಅವಧಿಯಲ್ಲಿ ಮೇಯರ್ ಸ್ಥಾನ ಪರಿಶಿಷ್ಟ ಜಾತಿ (ಮಹಿಳೆ), ಉಪ ಮೇಯರ್ ಸ್ಥಾನ ಸಾಮಾನ್ಯ ಮಹಿಳೆಗೆ ಮೀಸಲಾಗಿದೆ.

**45 ಪಾಲಿಕೆ ಸದಸ್ಯರು, ಸಂಸದ, ಇಬ್ಬರು ಶಾಸಕರು, 7 ವಿಧಾನ ಪರಿಷತ್ ಸದಸ್ಯರು ಸೇರಿ 55 ಜನ ಮತ ಚಲಾಯಿಸಲಿದ್ದಾರೆ.**

ಕಾಂಗ್ರೆಸ್ 22, ಬಿಜೆಪಿ 18, ನಾಲ್ಕು ಜನ ಪಕ್ಷೇತರರು, ಓರ್ವ ಜೆಡಿಎಸ್‌ನಿಂದ ಆಯ್ಕೆಯಾಗಿದ್ದಾರೆ. ಕಳೆದ ಅವಧಿಗೆ ಬಿಜೆಪಿಗೆ ನಾಲ್ಕು ಜನ ಪಕ್ಷೇತರರು ಬೆಂಬಲ ನೀಡಿದ್ದರು. ಈ ಬಾರಿಯೂ ಬಿಜೆಪಿಗೆ ಪಕ್ಷೇತರರ ಬೆಂಬಲ ನಿರೀಕ್ಷೆ ಇದ್ದು, ಸಂಸದ, ಶಾಸಕ, ಐವರು ವಿಧಾನ ಪರಿಷತ್ ಸದಸ್ಯರು ಸೇರಿ ಒಟ್ಟು 29 ಸದಸ್ಯ ಬಲವನ್ನು ಬಿಜೆಪಿ ಹೊಂದಿದೆ.

ಈ ಬಾರಿಯೂ ಆ ನಾಲ್ಕು ಜನ ಪಕ್ಷೇತರರು ಬಿಜೆಪಿಗೆ ಬೆಂಬಲ ನೀಡುವ ಸಾಧ್ಯತೆ ಇದೆ. ಹೀಗಾಗಿ, ಸಂಸದ, ಶಾಸಕ, ವಿಧಾನ ಪರಿಷತ್ ಸದಸ್ಯರು ಸೇರಿದಂತೆ ಒಟ್ಟು 29 ಸದಸ್ಯರ ಬಲ ಬಿಜೆಪಿ ಹೊಂದಿದೆ. (2ನೇ ಪುಟಕ್ಕೆ)


## ಚಿರಸ್ಮರಣೆ



ದಿ|| ಟಿ.ವಿ. ಗುರುದತ್ತ

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು
ಸದಾ ನಿಮ್ಮ ಸ್ಮರಣೆಯಲ್ಲಿರುವ....
ಪತ್ನಿ, ಪುತ್ರಿ, ಅಳಿಯಂದಿರು, ಸಹೋದರ, ಸಹೋದರಿಯರು ಮತ್ತು ಬಂಧು-ಮಿತ್ರರು



|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

## ಕೆಂಚಮ್ಮನಾಗ್ತಿಹಳ್ಳಿ ಗ್ರಾಮದ ಶರಣೆ ಜಿ.ಹೆಚ್. ಕುಸುಮ ಲಿಂಗೈಕ್ಯ



ಜಗಳೂರು ತಾಲ್ಲೂಕು ಕೆಂಚಮ್ಮನಾಗ್ತಿಹಳ್ಳಿ ವಾಸಿ
ಶರಣ ವೈ.ಕೆ. ಬಸವರಾಜಪ್ಪ
(ನಿವೃತ್ತ ಸೂಪರಿಂಟೆಂಡೆಂಟ್ ಇಂಜಿನಿಯರ್, ಬೆಸ್ಕಾಂ, ಬೆಂಗಳೂರು) ಇವರ ಧರ್ಮಪತ್ನಿ

**ಶರಣೆ ಜಿ.ಹೆಚ್. ಕುಸುಮ**

ಇವರು ದಿನಾಂಕ 24.02.2022 ರ ಗುರುವಾರ ಬೆಳಿಗ್ಗೆ 6.30 ಕ್ಕೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 58 ವರ್ಷ ವಯಸ್ಸಾಗಿತ್ತು.
ಮೃತರು ಪತಿ, ಇಬ್ಬರು ಪುತ್ರರು, ತಾಯಿ ಮತ್ತು ಸೊಸೆ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.
ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 25.02.2022ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಜಗಳೂರು ತಾಲ್ಲೂಕು ಕೆಂಚಮ್ಮನಾಗ್ತಿಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ :
ಲಿಂ|| ಶರಣ ವೈ. ಕಲ್ಲಪ್ಪ, ಶರಣೆ ಸರೋಜಮ್ಮ ಮತ್ತು ಮಕ್ಕಳು ಹಾಗೂ ಯರಲಕಟ್ಟೆ ವಂಶಸ್ಥರು
ಮೊಬೈಲ್ : 99028 49633, 91416 48691



ಚೆನ್ನೈ ಕುಮರನ್
ಇದೀಗ ಪ್ರದರ್ಶನ ಮತ್ತು
ಮಾರಾಟ
ದಾವಣಗೆರೆಯಲ್ಲಿ

1955
KUMARAN SILK
TRADERS
ಜಯ ನಗರ, ಬೆಂಗಳೂರು

VARAM
BOUTIQUE JEWELS
92.5 SILVER JEWELLERY

ವೇದಿಕೆ
ಸದರನ್ ಸ್ಟಾರ್ ಹೋಟೆಲ್, ದಾವಣಗೆರೆ
ದಿನಾಂಕ
25th, 26th, 27th ಫೆಬ್ರವರಿ 2022
ಬೆಳಿಗ್ಗೆ 10.00 ರಿಂದ ರಾತ್ರಿ : 9.00 ರವರೆಗೆ

ಅತಿ ಕಡಿಮೆ ಬೆಲೆಯಲ್ಲಿ
ಕಾಂಚೀಪುರಂ ರೇಷ್ಮೆ ಸೀರೆಗಳು



ಪ್ರತ್ಯೇಕ ರಿಯಾಯಿತಿ
5 ರಿಂದ 10%

ಹೊಸ ನಂ. 15, ಹಳೆಯ ನಂ. 653, 11ನೇ ಸಿ ಮೇನ್ ರೋಡ್, 5ನೇ ಬ್ಲಾಕ್, ಜಯನಗರ, ಬೆಂಗಳೂರು-560 041
ಫೋ. : 080-2663 1300, ಸೆಲ್ : 88677 92923

# ಖಾದಿ ಉತ್ಪನ್ನ ಹೆಚ್ಚಾಗಿ ಬಳಸಿ, ಪ್ರೋತ್ಸಾಹಿಸಿ

## ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ನಿರ್ದೇಶಕರಾದ ಶ್ರೀಮತಿ ಆರ್.ವಿನೋತ್ ಪ್ರಿಯಾ



**ಇಂದಿನಿಂದ 15 ದಿನಗಳ ಕಾಲ ಖಾದಿ ಮತ್ತು ಗ್ರಾಮೋದ್ಯೋಗ ವಸ್ತುಗಳ ಪ್ರದರ್ಶನ - ಮಾರಾಟ.**

**76 ಮಳಿಗೆಗಳಲ್ಲಿ ಖಾದಿ, ರೇಷ್ಮೆ ಉತ್ಪನ್ನಗಳು, ಅಡಿಕೆ, ಚರ್ಮದ ಉಡುಪು, ಮಣ್ಣು, ಬಿದಿರು ಉತ್ಪನ್ನಗಳ ಮಾರಾಟ.**

ದಾವಣಗೆರೆ, ಫೆ.24- ಖಾದಿ ದೇಶದ ಹೆಮ್ಮೆಯ ಪ್ರತೀಕ. ಖಾದಿಯನ್ನು ಹೆಚ್ಚಾಗಿ ಬಳಸಿ ಪ್ರೋತ್ಸಾಹಿಸಬೇಕು ಎಂದು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ನಿರ್ದೇಶಕರಾದ ಶ್ರೀಮತಿ ಆರ್.ವಿನೋತ್ ಪ್ರಿಯಾ ಕರೆ ನೀಡಿದರು.

ನಗರದ ಹೈಸ್ಕೂಲ್ ಮೈದಾನದಲ್ಲಿ ಇಂದಿನಿಂದ ಮಾ.10ರವರೆಗೆ ನಡೆಯಲಿರುವ ರಾಜ್ಯಮಟ್ಟದ ಖಾದಿ ಮತ್ತು ಗ್ರಾಮೋದ್ಯೋಗ ವಸ್ತುಗಳ ಮಾರಾಟ ಹಾಗೂ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಖಾದಿ ಉತ್ಪನ್ನಗಳನ್ನು ಪರಿಚಯಿಸಲು ಹಾಗೂ ಮಾರಾಟ ಮಾಡಲು ಇಲಾಖೆಯಿಂದ ಜಿಲ್ಲೆ ಹಾಗೂ ರಾಷ್ಟ್ರಮಟ್ಟದಲ್ಲಿ ಇಂತಹ ಪ್ರದರ್ಶನ ಮಳಿಗೆಗಳನ್ನು ಸ್ಥಾಪಿಸಿ ಪ್ರೋತ್ಸಾಹಿಸಲಾಗುತ್ತದೆ ಎಂದರು.

ಇಲಾಖೆಯಿಂದ ಖಾದಿ ಬಟ್ಟೆಗಳ ತಯಾರಿಕೆಗೆ ಸಂಬಂಧಿಸಿದಂತೆ ಅನೇಕ ಯೋಜನೆಗಳಿವೆ, ರಿಯಾಯಿತಿ ದರದಲ್ಲಿ ಸಾಲ ಸೌಲಭ್ಯ ದೊರೆಯುತ್ತದೆ. ಯುವಕರು ಖಾದಿ ಉತ್ಪನ್ನಗಳ ತಯಾರಿಕೆಯಿಂದ ಸ್ವಾವಲಂಬಿ ಜೀವನ ಸಾಗಿಸುವ ಜೊತೆಗೆ ಹತ್ತಾರು ಜನಗಳಿಗೆ ಉದ್ಯೋಗವನ್ನೂ ನೀಡಬಹುದು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಮಾತನಾಡಿ, ರಾಜ್ಯದ ಹೃದಯ ಭಾಗದಲ್ಲಿರುವ ದಾವಣಗೆರೆ ಜಿಲ್ಲೆಯಲ್ಲಿ ಹೊರ ರಾಜ್ಯ ಹಾಗೂ ನೆರೆಯ ಜಿಲ್ಲೆಗಳ ಜನರೂ ಆಗಮಿಸಿ ವ್ಯಾಪಾರ ಮಾಡುವುದರಿಂದ ದಾವಣಗೆರೆ ವಿಶೇಷತೆ ಹೊಂದಿದೆ ಎಂದರು.

5 ಲಕ್ಷ ಜನ ಕುಶಲಕರ್ಮಿಗಳು ಕೆಲಸ ಮಾಡುತ್ತಿದ್ದು, 1700 ಕೋಟಿ ರೂ. ವ್ಯವಹಾರ ನಡೆಯುತ್ತಿದೆ. ರಾಜ್ಯದಲ್ಲಿ 350 ಕೋಟಿ ವ್ಯವಹಾರ ನಡೆಯುತ್ತಿದೆ. 30 ಸಾವಿರ ಕುಶಲ ಕರ್ಮಿಗಳು ಕೆಲಸ ಮಾಡುತ್ತಿದ್ದಾರೆ ಎಂದರೆ ಈ ಕ್ಷೇತ್ರದ ಮಹತ್ವ ಎಷ್ಟೆಂದು ತಿಳಿಯಬಹುದು ಎಂದರು.

ಉದ್ಯೋಗಕ್ಕಾಗಿ ಅಲೆಯುವ ಯುವಕರು ಇಂತಹ ಮೇಳಗಳಿಗೆ ಬಂದು ಸ್ವ ಉದ್ಯೋಗದ ಬಗ್ಗೆ ತಿಳಿದುಕೊಳ್ಳಬೇಕು. ಸಂಬಳಕ್ಕಾಗಿ ಕೈ ಚಾಚುವ ಬದಲು ತಾವೇ ಉದ್ಯೋಗದಾತರಾಗಬೇಕು ಎಂದು ಕಿವಿ ಮಾತು ಹೇಳಿದರು.

ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಜಿ.ವಿ. ನಾಗರಾಜ, ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ರಾಜ್ಯ ನಿರ್ದೇಶಕ ಡಾ.ಇ. ಮೋಹನ್ ರಾವ್, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಬಿ.ಆನಂದ್, ಲೀಡ್ ಬ್ಯಾಂಕ್ ವಿಭಾಗೀಯ ವ್ಯವಸ್ಥಾಪಕ ಶುಶ್ರುತ್ ಡಿ.ಶಾಸ್ತ್ರಿ ಸೊಸೈಟಿ ಸಂಘದ ನಿರ್ದೇಶಕ ರಾಮಪ್ಪ, ಕೆವಿಐಸಿಯ ಬಾಲಕೃಷ್ಣ ಉಪಸ್ಥಿತರಿದ್ದರು. ಮೋತಿ ವೀರಪ್ಪ ಕಾಲೇಜು ಉಪನ್ಯಾಸಕ ಎಂ.ಡಿ. ನಾಗರಾಳ ನಿರೂಪಿಸಿದರು. ರಂಗನಾಥ ಸ್ವಾಮಿ ವಂದಿಸಿದರು.

# ಇಂದು ಮೇಯರ್, ಉಪಮೇಯರ್ ಸ್ಥಾಯಿ ಸಮಿತಿಗಳಿಗೆ ಚುನಾವಣೆ

ದಾವಣಗೆರೆ ಮಹಾನಗರ ಪಾಲಿಕೆಯ ಮೇಯರ್, ಉಪಮೇಯರ್ ಮತ್ತು ನಾಲ್ಕು ಸ್ಥಾಯಿ ಸಮಿತಿಗಳ ಸದಸ್ಯರ ಸ್ಥಾನಗಳಿಗೆ ಇಂದು ಬೆಳಗ್ಗೆ 11 ಗಂಟೆಗೆ ಪಾಲಿಕೆಯ ಸಭಾಂಗಣದಲ್ಲಿ ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತ ನವೀನ್ ರಾಜ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ಚುನಾವಣೆ ನಡೆಯಲಿದೆ.

**ವಾಹನ ನಿಲುಗಡೆ ನಿಷೇಧ:** ಚುನಾವಣೆ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಆವರಣದಲ್ಲಿ ಯಾವುದೇ ರೀತಿಯ ವಾಹನಗಳ ನಿಲುಗಡೆಗೆ ಅವಕಾಶವಿರುವುದಿಲ್ಲವೆಂದು ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

# ಇಂದು, ನಾಳೆ ಮಹಾರುದ್ರಯಾಗ

ದಾವಣಗೆರೆ : ಶ್ರೀ ದೇವನಗರಿ ಶ್ರೀಕ್ಷೇತ್ರ ನವಸ್ಥಾನ, ಶ್ರೀ ಮಹಾ ಕೊಪ್ಪದಾಂಬ ಸೇವಾ ಟ್ರಸ್ಟ್ ವತಿಯಿಂದ 25ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಇಂದು ಮತ್ತು ನಾಳೆ ಲೋಕಕಲ್ಯಾಣಾರ್ಥವಾಗಿ ಶ್ರೀ ಶನೈಶ್ಚರ ಸ್ವಾಮಿಯ ಮಹಾರುದ್ರಯಾಗವನ್ನು ಹಮ್ಮಿಕೊಳ್ಳಲಾಗಿದೆ.

ಇಂದು ಗಂಗೆ ಪೂಜೆ, ಗಣಪತಿ ಪೂಜೆ, ನವಗ್ರಹ ಪೂಜೆ, ಪುಣ್ಯಾಹನಾಂದಿ, ರಕ್ಷಾಬಂಧನ, ಕಳಸ ಸ್ಥಾಪನೆಗಳು ಸೇರಿದಂತೆ ವಿವಿಧ ಹೋಮ, ಅಭಿಷೇಕಗಳು ನಡೆಯಲಿವೆ. ನಾಳೆ ಶನಿವಾರ ಮಧ್ಯಾಹ್ನ 1 ಗಂಟೆಗೆ ಪೂರ್ಣಾಹುತಿ ಸಮರ್ಪಣೆ ಆದ ನಂತರ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಶ್ರೀಕ್ಷೇತ್ರ ನವಸ್ಥಾನ, ಶ್ರೀ ಮಹಾ ಕೊಪ್ಪದಾಂಬ ಸೇವಾ ಟ್ರಸ್ಟ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

# ಕಣವಿಗೆ 'ರಾಷ್ಟ್ರಕವಿ' ಸುತಾರಗೆ 'ಕರ್ನಾಟಕ ರತ್ನ' ನೀಡಲು ಮನವಿ

**ಹರಿಹರ ಕಸಾಪ**

ಹರಿಹರ, ಫೆ.24- ಸಮನ್ವಯ ಕವಿ, ನಾಡೋಜ ಡಾ.ಚನ್ನವೀರ ಕಣವಿ ಅವರಿಗೆ 'ರಾಷ್ಟ್ರಕವಿ' ಪ್ರಶಸ್ತಿ ಮತ್ತು ಕರ್ನಾಟಕದ ಕಬೀರ ಎಂದೇ ಹೆಸರಾದ ಇಬ್ರಾಹಿಂ ಸುತಾರ ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡುವಂತೆ ಹರಿಹರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಿ. ಎಂ.ಮಂಜುನಾಥಯ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದ್ದಾರೆ.


# ಕರ್ನಾಟಕ ಗ್ರಾಮೀಣ ಬ್ಯಾಂಕ್

(ಸರ್ಕಾರಿ ಸ್ವಾಮ್ಯದ ಷೆಡ್ಯೂಲ್ಡ್ ಬ್ಯಾಂಕ್) ಪ್ರವರ್ತಕರು : ಕೆನರಾ ಬ್ಯಾಂಕ್

ಪ್ರಧಾನ ಕಛೇರಿ : ಸಂಗನಕಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ-583 103 (ಕರ್ನಾಟಕ)

**ಪ್ರಾದೇಶಿಕ ಕಚೇರಿ : ನಂ.496/66, ಸಂಕೋಳ್ ಪ್ಲಾಜಾ, 2ನೇ ಮಹಡಿ ನಾಗನೂರು ರಸ್ತೆ, ಶಾಮನೂರು, ದಾವಣಗೆರೆ-577 004**

ಫೋನ್: 08192 - 223913, 233632 e-mail: rodvg@kgbk.in

## ಚಿನ್ನಾಭರಣಗಳ ಬಹಿರಂಗ ಹರಾಜು

ಈ ಕೆಳಕಂಡ ಮಹನೀಯರು ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಶಾಖೆಯಲ್ಲಿ ತಮ್ಮ ಚಿನ್ನಾಭರಣ ಆಧಾರದ ಸಾಲ ಪಡೆದಿದ್ದು, ವಾಯಿದೆ ಪ್ರಕಾರ ಸಾಲ ಮರುಪಾವತಿ ಮಾಡದೇ ಇದ್ದ ಕಾರಣ, ಇವರಿಗೆ ರಿಜಿಸ್ಟರ್ಡ್ ಅಂಚೆ ಮುಖಾಂತರ ಸಾಲಮರುಪಾವತಿ ಮಾಡುವಂತೆ ಕೋರಿ ಕಳುಹಿಸಿದ ನೋಟಿಸ್ ಜಾರಿಯಾಗಿರುತ್ತದೆ. ಆದರೂ ಸಾಲ ಮರುಪಾವತಿ ಮಾಡಲು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ, ಅವರಿಗೆ ಈ ಮೂಲಕ ತಿಳಿಸುವುದೇನೆಂದರೆ, ತಾರೀಖು 14-03-2022 ರಂದು ಅಥವಾ ಅದಕ್ಕೆ ಮುಂಚೆ ಬ್ಯಾಂಕಿಗೆ ಭೇಟಿ ಕೊಟ್ಟು ಸಂಪೂರ್ಣ ಹಣ, ಬಡ್ಡಿ ಹಾಗೂ ಇತರೆ ಖರ್ಚುಗಳನ್ನು ಮರುಪಾವತಿ ಮಾಡತಕ್ಕದ್ದು, ಇಲ್ಲವಾದಲ್ಲಿ ತಾವು ಒತ್ತೆ ಇಟ್ಟ ಆಭರಣಗಳನ್ನು ತಾರೀಖು 14-03-2022 ರಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ಬ್ಯಾಂಕಿಗೆ ಸೂಕ್ತವಾದ ಇನ್ನಾವುದೇ ದಿನದಂದು ನೋಟೀಸು ಕೊಡದೇ ಶಾಖೆಯ ಆವರಣದಲ್ಲಿ ಬಹಿರಂಗವಾಗಿ ಯಾ ಖಾಸಗಿಯಾಗಿ ಹರಾಜು ಮಾಡಲಾಗುವುದು. ಸದರಿ ಹರಾಜಿನಿಂದ ಬಂದ ಮೊತ್ತವು ತಮ್ಮ ಸಾಲವನ್ನು ಸಂಪೂರ್ಣ ತೀರುವಳಿ ಮಾಡಲು ವಿಫಲವಾದಲ್ಲಿ ತಾವು ವೈಯಕ್ತಿಕವಾಗಿ ಹೊಣೆಗಾರರಾಗಿರುತ್ತೀರಿ ಹಾಗೂ ಹರಾಜಿಗೆ ತಗಲುವ ಎಲ್ಲಾ ವೆಚ್ಚಕ್ಕೂ ನೀವೇ ಹೊಣೆಗಾರರೆಂದು ತಿಳಿಯಿರಿ.

**ಶಾಖೆ: ಪಲ್ಲಾಗಟ್ಟೆ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ. ಮೊ: 9035392819**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಟಿ.ಎಂ. ಹನುಮಂತಪ್ಪ ಬಿನ್. ಮಂಜಪ್ಪ, ಕಲ್ಲೇನಹಳ್ಳಿ | 40777302005120 | 77,204-00 |
| 2 | ಶ್ರೀಮತಿ ಹಿರಿಯಮ್ಮ ಕೋಂ. ಕರಿಯಪ್ಪ, ಪಲ್ಲಾಗಟ್ಟೆ | 40777302006020 | 35,015-00 |
| 3 | ಶ್ರೀ ಕಲ್ಲಿಂಗಪ್ಪ ಎ.ಡಿ. ಬಿನ್. ದಾನಪ್ಪ, ಕಲ್ಲೇನಹಳ್ಳಿ | 40777302008220 | 59,200-00 |
| 4 | ಶ್ರೀ ಬಸವರಾಜ ಎಂ. ಕೆ. ಬಿನ್. ಅರಿಯಪ್ಪ, ಉರ್ಲಕಟ್ಟೆ | 40777302011620 | 8,593-00 |
| 5 | ಶ್ರೀ ಅಜ್ಜಪ್ಪ ಕೆ. ಸಿ. ಬಿನ್. ಚಿದಾನಂದಪ್ಪ, ಪಲ್ಲಾಗಟ್ಟೆ | 40777302012120 | 1,00,953-00 |
| 6 | ಶ್ರೀ ತಿಪ್ಪೇಶಿ ಬಿನ್. ಈರಪ್ಪ, ಪಲ್ಲಾಗಟ್ಟೆ | 40777302018320 | 26,025-00 |
| 7 | ಶ್ರೀ ಬಸವರಾಜ ಬಿನ್. ಸಣ್ಣಬಸಪ್ಪ, ಉರ್ಲಕಟ್ಟೆ | 40777302018720 | 87,629-00 |
| 8 | ಶ್ರೀಮತಿ ಹನುಮಮ್ಮ ಕೋಂ. ದಂಡೈಪ್ಪ, ಕಲ್ಲೇನಹಳ್ಳಿ | 40777302019120 | 15,813-00 |
| 9 | ಶ್ರೀ ರಾಜಪ್ಪ ಬಿನ್. ಚಂದ್ರಪ್ಪ, ಪಲ್ಲಾಗಟ್ಟೆ | 40777302020220 | 77,202-00 |
| 10 | ಶ್ರೀ ಬುಗುಳಪ್ಪ ಬಿನ್. ಕರಿಯಪ್ಪ, ಪಲ್ಲಾಗಟ್ಟೆ | 40777302021020 | 58,961-00 |
| 11 | ಶ್ರೀ ಮಂಜುನಾಥ ಎಸ್.ಬಿ. ಬನ್. ಅಜ್ಜಪ್ಪ ಎಸ್.ಬಿ., ಸೂರಗೊಂಡನಹಳ್ಳಿ | 40777302023320 | 49,792-00 |
| 12 | ಶ್ರೀ ವೀರಪ್ಪ ಪಿ.ಟಿ. ಬಿನ್. ಪೂಜಾರಿ ತಿಮ್ಮಪ್ಪ, ಪಲ್ಲಾಗಟ್ಟೆ | 40777302028020 | 6,729-00 |
| 13 | ಶ್ರೀ ಮಂಜಪ್ಪ ಬಿನ್. ಬಸಪ್ಪ, ಪಲ್ಲಾಗಟ್ಟೆ | 40777302029820 | 75,359-00 |
| 14 | ಶ್ರೀ ನಂಜಪ್ಪ ಎ.ಬಿ. ಬಿನ್. ಭರ್ಮಪ್ಪ ಬಿ., ಕೆಂಚಮ್ಮನಗತ್ತಿಹಳ್ಳಿ | 40777302031320 | 37,077-00 |
| 15 | ಶ್ರೀಮತಿ ವನಜಾಕ್ಷಿ ಕೋಂ. ಶಿವಕುಮಾರ್, ಪಲ್ಲಾಗಟ್ಟೆ | 40777302033220 | 21,201-00 |
| 16 | ಶ್ರೀ ವೇದಮೂರ್ತಿ ಆರ್. ಎಸ್. ಬಿನ್. ಶಿವಕುಮಾರ್, ದಿದ್ದಿಗೆ | 40777302033920 | 1,00,559-00 |
| 17 | ಶ್ರೀ ಮಾರುತಿ ಕೆ. ಎಸ್. ಬಿನ್. ಸಿದ್ದಪ್ಪ ಎಸ್.ಬಿ., ಪಲ್ಲಾಗಟ್ಟೆ | 40777302033820 | 1,22,746-00 |
| 18 | ಶ್ರೀ ಮಂಜಪ್ಪ ಬಿನ್. ಕೆಂಗಹನುಮಪ್ಪ, ಮರಿಕುಂಟೆ | 40777302036320 | 21,914-00 |
| 19 | ಶ್ರೀ ಕೆಂಚಪ್ಪ ಬಿನ್. ಸಿದ್ದಪ್ಪ, ಪಲ್ಲಾಗಟ್ಟೆ | 40777302036420 | 35,169-00 |
| 20 | ಶ್ರೀಮತಿ ಹನುಮಕ್ಕ ಕೋಂ. ಲೇಟ್ ಶಂಭುಲಿಂಗಪ್ಪ, ಕಲ್ಲೇನಹಳ್ಳಿ | 40777302038120 | 54,824-00 |
| 21 | ಶ್ರೀ ಹನುಮಂತಪ್ಪ ಬಿ. ಬಿನ್. ಬಸಮ್ಮ, ಉರ್ಲಕಟ್ಟೆ | 40777302038620 | 21,873-00 |
| 22 | ಶ್ರೀ ಮಂಜುನಾಥ ಬಿನ್. ರಂಗಪ್ಪ, ತಾರೇಹಳ್ಳಿ | 40777302038520 | 43,869-00 |
| 23 | ಶ್ರೀಮತಿ ರೇಖಾ ಕೋಂ. ಜಯ್ಯಪ್ಪ, ಪಲ್ಲಾಗಟ್ಟೆ | 40777302039620 | 10,925-00 |
| 24 | ಶ್ರೀ ಶಂಭಣ್ಣ ಬಿನ್. ಸಿದ್ದಪ್ಪ, ಮರಿಕುಂಟೆ | 40777302039420 | 33,954-00 |
| 25 | ಶ್ರೀ ಎ.ಕೆ. ಶೇಖರಪ್ಪ ಬಿನ್. ಪಕ್ಕೀರಪ್ಪ, ಉರ್ಲಕಟ್ಟೆ | 40777302040620 | 26,246-00 |
| 26 | ಶ್ರೀ ಸಿ.ಡಿ. ಈಶ್ವರಪ್ಪ ಬಿನ್. ದಾನಪ್ಪ, ಮರಿಕುಂಟೆ | 40777302041620 | 8,739-00 |
| 27 | ಶ್ರೀ ಕೆ. ಎಸ್. ಅಜ್ಜಯ್ಯ ಬಿನ್. ಶಿವಣ್ಣ, ಪಲ್ಲಾಗಟ್ಟೆ | 40777302042120 | 33,062-00 |
| 28 | ಶ್ರೀಮತಿ ರತ್ನಮ್ಮ ಬಿನ್. ಶೇಖರಪ್ಪ, ಪಲ್ಲಾಗಟ್ಟೆ | 40777302042320 | 32,575-00 |
| 29 | ಶ್ರೀಮತಿ ಈರಮ್ಮ ಕೋಂ. ಬಿ. ಸಿದ್ದಪ್ಪ, ಗಿಡ್ಡನಕಟ್ಟೆ | 40777302042820 | 75,852-00 |
| 30 | ಶ್ರೀ ಪೂಜಾರ ಕಾಟಪ್ಪ ಬಿನ್. ಪೂಜಾರ ಕರಿಯಪ್ಪ, ಪಲ್ಲಾಗಟ್ಟೆ | 40777302044120 | 33,596-00 |
| 31 | ಶ್ರೀ ಲೋಕೇಶ್ ಬಿನ್. ರಂಗಪ್ಪ, ತಾರೇಹಳ್ಳಿ | 40777302046520 | 53,976-00 |
| 32 | ಶ್ರೀಮತಿ ಲಲಿತಮ್ಮ ಕೋಂ. ಲೋಕೇಶ್, ಪಲ್ಲಾಗಟ್ಟೆ | 40777302047120 | 75,502-00 |
| 33 | ಶ್ರೀ ಮೋಹನ್ ಎನ್. ಬಿನ್. ನಿಂಗಪ್ಪ, ತಾರೇಹಳ್ಳಿ | 40777302047020 | 77,654-00 |
| 34 | ಶ್ರೀಮತಿ ಸಾಕಮ್ಮ ಕೋಂ. ಹನುಮಂತಪ್ಪ, ಪಲ್ಲಾಗಟ್ಟೆ | 40777302048320 | 16,414-00 |
| 35 | ಶ್ರೀಮತಿ ಜಲಜಾಕ್ಷಿ ಕೋಂ. ಮಂಜಪ್ಪ, ಗಿಡ್ಡನಕಟ್ಟೆ | 40777302050020 | 39,918-00 |
| 36 | ಶ್ರೀಮತಿ ಗಿರಿಜಮ್ಮ ಕೋಂ. ಶೇಖರಪ್ಪ, ದಿದ್ದಿಗೆ | 40777302049720 | 43,151-00 |
| 37 | ಶ್ರೀ ಚನ್ನಬಸಪ್ಪ ಪಿ. ಎಂ. ಬಿನ್. ಮರುಳಸಿದ್ದಪ್ಪ, ಗೋಡೆ | 40777302050920 | 1,28,136-00 |
| 38 | ಶ್ರೀಮತಿ ಗದಿಗೆಮ್ಮ ಕೋಂ. ರಂಗಪ್ಪ, ತಾರೇಹಳ್ಳಿ | 40777302051020 | 14,612-00 |
| 39 | ಶ್ರೀ ಮರುಳಸಿದ್ದೇಶ ಕೆ. ಎನ್. ಬಿನ್. ನಾಗರಾಜಪ್ಪ ಕೆ.ಸಿ., ಪಲ್ಲಾಗಟ್ಟೆ | 40777302052720 | 8,653-00 |
| 40 | ಶ್ರೀ ಬಿ.ಬಿ. ಹಾಲೇಶ ಬಿನ್. ಬೋರಪ್ಪ, ಪಾಲನಾಯಕನಕೋಟೆ | 40777302052520 | 10,803-00 |
| 41 | ಶ್ರೀ ನಾಗರಾಜ ಟಿ.ಸಿ. ಬಿನ್. ಚೌಡಪ್ಪ, ಉರ್ಲಕಟ್ಟೆ | 40777302052620 | 64,461-00 |
| 42 | ಶ್ರೀ ಜೆ. ರಂಗಪ್ಪ ಬಿನ್. ತಿಪ್ಪಪ್ಪ, ಪಲ್ಲಾಗಟ್ಟೆ | 40777302054420 | 46,177-00 |
| 43 | ಶ್ರೀ ಕರಿಬಸಯ್ಯ ಜಿ. ಬಿನ್. ಗುರುಮೂರ್ತಯ್ಯ, ತಾರೇಹಳ್ಳಿ | 40777302054820 | 92,432-00 |
| 44 | ಶ್ರೀ ನಾಗರಾಜ ಟಿ.ಸಿ. ಬಿನ್. ಚೌಡಪ್ಪ, ಉರ್ಲಕಟ್ಟೆ | 40777302064220 | 84,815-00 |
| 45 | ಶ್ರೀ ಅಜ್ಜಪ್ಪ ಈ.ಪಿ. ಬಿನ್. ಪರಮೇಶ್ವರಪ್ಪ, ಕೆಂಚಮ್ಮನಗತ್ತಿಹಳ್ಳಿ | 40777302003021 | 25,314-00 |
| 46 | ಶ್ರೀ ಸಿದ್ದೇಶಿ ಎನ್.ಪಿ. ಬಿನ್. ವೀರಬಸಪ್ಪ, ಗೋಡೆ | 40777302008421 | 56,683-00 |
| 47 | ಶ್ರೀ ಎಸ್.ಟಿ. ಹೇಮಣ್ಣ ಬಿನ್. ಎಸ್.ವೈ. ತಿಮ್ಮಣ್ಣ, ಪಲ್ಲಾಗಟ್ಟೆ | 40777302022321 | 89,344-00 |
| 48 | ಶ್ರೀ ರಂಗಪ್ಪ ಬಿನ್. ಹನುಮಂತಪ್ಪ, ಗೋಡೆ | 40777302023721 | 37,369-00 |
| 49 | ಶ್ರೀಮತಿ ಬಸಮ್ಮ ಎಸ್.ಡಿ. ಕೋಂ. ಕಲ್ಲೇಶ್ ಎಸ್.ಡಿ., ಸೂರಗೊಂಡನಹಳ್ಳಿ | 40777302029621 | 32,021-00 |
| 50 | ಶ್ರೀಮತಿ ಗೀತಮ್ಮ ಟಿ.ಹೆಚ್. ಬಿನ್. ಹನುಮಂತಪ್ಪ, ಪಲ್ಲಾಗಟ್ಟೆ. | 40777302031221 | 57,690-00 |

**ಶಾಖೆ: ಲಿಂಗಾಪುರ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ. ಮೊ: 9502013679, 8919017899**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಪೆರುಮಲ ಜಿ. ಬಿನ್. ಗೋವಿಂದಪ್ಪ, ಲಿಂಗಾಪುರ | 40940302013521 | 22,068-00 |
| 2 | ಶ್ರೀಮತಿ ಶಾರದಮ್ಮ ಕೋಂ. ಕೆ. ಪರಮೇಶ್ವರಪ್ಪ, ಚನ್ನಮುಂಬಾಪುರ, ಹನಗವಾಡಿ ಪೋಸ್ಟ್ | 40940302083020 | 35,641-00 |
| 3 | ಶ್ರೀಮತಿ ಶಾಂತಮ್ಮ ಕೋಂ. ಕರಿಯಪ್ಪ, ಹನಗವಾಡಿ | 40940302081520 | 62,425-00 |
| 4 | ಶ್ರೀ ಅಪ್ಪಾಲರಾಜು ಬಿನ್. ಅಪ್ಪಾರಾವ್, ಹೊಸಹಳ್ಳಿ | 40940302077620 | 2,65,690-00 |
| 5 | ಶ್ರೀಮತಿ ಸೂರ್ಯಕುಮಾರಿ ಕೋಂ. ಅಪ್ಪಾಲರಾಜು, ಹೊಸಹಳ್ಳಿ | 40940302077520 | 2,80,810-00 |
| 6 | ಶ್ರೀ ಸತೀಶ ಜಿ. ಬಿನ್. ಗೋಪಾಲಪ್ಪ, ಲಿಂಗಾಪರು | 40940302067920 | 2,55,462-00 |
| 7 | ಶ್ರೀ ರಾಜಪ್ಪ ಡಿ. ಎಂ. ಬಿನ್. ನರಸಿಂಹಪ್ಪ, ಚನ್ನಮುಂಬಾಪುರ | 40940302067820 | 2,84,538-00 |
| 8 | ಶ್ರೀಮತಿ ಗೀತಾ ಕೋಂ. ಮಂಜುನಾಥ, ಲಿಂಗಾಪುರ, ಹನಗವಾಡಿ ಪೋಸ್ಟ್ | 40940302061421 | 99,286-00 |
| 9 | ಶ್ರೀ ಸತೀಶ ಜಿ. ಬಿನ್. ಗೋಪಾಲಪ್ಪ, ಲಿಂಗಾಪುರ. | 40940302070321 | 1,50,446-00 |

ಸ್ಥಳ : ದಾವಣಗೆರೆ
ದಿನಾಂಕ : 24-02-2022

ಸಹಿ/- ಕರ್ನಾಟಕ ಗ್ರಾಮೀಣ ಬ್ಯಾಂಕ್
ಪ್ರಾದೇಶಿಕ ಕಛೇರಿ,ದಾವಣಗೆರೆ.


# ಡ್ರಮ್ ಸೀಡರ್ ಬಳಕೆ ಮಾದರಿ ಪದ್ಧತಿ ಆಗಿದೆ

## ಭತ್ತದ ಬೇಸಾಯ ತರಬೇತಿ ಕಾರ್ಯಕ್ರಮದಲ್ಲಿ ಪ್ರಗತಿಪರ ರೈತ ನಿಂಗಪ್ಪ



ಹರಿಹರ, ಫೆ.24- ತಾಲ್ಲೂಕಿನ ದೀಟೂರು ಗ್ರಾಮದಲ್ಲಿ ಕೃಷಿ ಇಲಾಖೆ ಮತ್ತು ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿ ಇವರಿಂದ ಡ್ರಮ್ ಸೀಡರ್ ಭತ್ತದ ಬೇಸಾಯ ಕುರಿತು ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿತ್ತು,

ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಕೀಟಶಾಸ್ತ್ರ ತಜ್ಞ ದಾನಪ್ಪ ಕೋನರೆಡ್ಡಿ, ಭತ್ತದಲ್ಲಿ ಕೀಟ ಮತ್ತು ರೋಗ ಬರುವುದು ಸಹಜ, ಅದನ್ನು ನಿರ್ಲಕ್ಷಿಸಿದರೆ ಇಳುವರಿ ಕುಂಠಿತವಾಗುವುದು ಎಂದರು.

ಸಹಾಯಕ ಕೃಷಿ ನಿರ್ದೇಶಕ ಎ.ನಾರನಗೌಡ ಮಾತನಾಡಿ, ತಾಲ್ಲೂಕಿನಲ್ಲಿ ಹೆಚ್ಚು ಭತ್ತ ಬೆಳೆಯುವ ಪ್ರದೇಶವಿದ್ದು, ಕೂಲಿ ಕಾರ್ಮಿಕರು ಸರಿಯಾದ ಸಮಯಕ್ಕೆ ಸಿಗದೆ ರೈತರಿಗೆ ಇಳುವರಿ ಕುಠಿತವಾಗಿದೆ. ಈ ಸಮಸ್ಯೆಯಿಂದ ಹೊರಬರಲು ಡ್ರಮ್-ಸೀಡರ್ ಪದ್ದತಿ ಒಂದು ಮಾದರಿಯಾಗಿದೆ. ಈ ತರಬೇತಿಯನ್ನು ಸದುಪಯೋಗ ಪಡೆದುಕೊಳ್ಳಬೇಕೆಂದು ರೈತರಿಗೆ ತಿಳಿಸಿದರು.

ಅಧ್ಯಕ್ಷತೆ ವಹಿಸಿ ಕಾರ್ಯಕ್ರಮ ಉದ್ಘಾಟಿಸಿದ ಪ್ರಗತಿ ಪರ ರೈತ ನಿಂಗಪ್ಪ ಮಾತನಾಡಿ, ಪ್ರಗತಿಪರ ರೈತ ನಿಂಗಪ್ಪ ಮಾತನಾಡಿ, ಡ್ರಮ್ ಸೀಡರ್ ಬಳಕೆಯಿಂದ ಈ ಬೇಸಿಗೆಯಲ್ಲಿ 8 ಎಕರೆಯಲ್ಲಿ ಭತ್ತ ಬಿತ್ತನೆ ಕೈಗೊಂಡಿದ್ದು, ಇದರಿಂದ ನಾನು ಸಮಯಕ್ಕೆ ಸರಿಯಾಗಿ ನಾಟಿ ಮಾಡಲು ಸಾಧ್ಯವಾಯಿತು. ಈಗ ಈ ಬೆಳೆಯು 45 ದಿನದಲ್ಲಿ ಇದ್ದು, ಇತರೆ ಪದ್ದತಿಯಂತೆ ಉತ್ತಮವಾಗಿದೆ ಎಂದರು. ಕೃಷಿ ಅಧಿಕಾರಿ ಮಲ್ಲಿಕಾರ್ಜುನ ಕೆ. ಸ್ವಾಗತಿಸಿದರು, ಸಹಾಯಕ ಕೃಷಿ ನಿರ್ದೇಶಕ ಮೊಹಮದ್ ರಫೀಕ್ ಕಾರ್ಯಕ್ರಮ ನಿರೂಪಿಸಿದರು.

ಪ್ರಗತಿಪರ ರೈತರಾದ ಮಹೇಶ್ವರಪ್ಪ, ಪ್ರಸಾದ್ ರೆಡ್ಡಿ, ದೀಟೂರು ಗ್ರಾಮಸ್ಥರು, ಆತ್ಮ ಯೋಜನೆಯ ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕ ಯೋಗೇಶ್ ಗೌಡರು ಉಪಸ್ಥಿತರಿದ್ದರು.

# ನೀರಿನ ತೊಟ್ಟಿ : ವ್ಯಾಪ್ತಿ ವಿಸ್ತರಿಸಿದ 'ಕರುಣಾ'



ದಾವಣಗೆರೆ, ಫೆ.24- ಕರುಣಾ ಜೀವ ಕಲ್ಯಾಣ ಟ್ರಸ್ಟಿನಿಂದ ಪಶು, ಪಕ್ಷಿಗಳಿಗೆ ಬೇಸಿಗೆಯಲ್ಲಿನ ಕುಡಿಯುವ ನೀರಿನ ದಾಹವನ್ನು ನೀಗಿಸಲು ದಾವಣಗೆರೆ, ಹರಿಹರ, ಧಾರವಾಡ, ರಾಣೇಬೆನ್ನೂರು, ಚಿತ್ರದುರ್ಗ, ಹಾವೇರಿ ಮುಂತಾದೆಡೆಗಳಲ್ಲಿ ನೀರಿನ ತೊಟ್ಟಿಗಳನ್ನು ಇಡಲಾಗುತ್ತಿದೆ.

ಈ ಸತ್ಕಾರ್ಯಕ್ಕೆ ಧನಸಹಾಯವಿತ್ತು ಸಹಕರಿಸಿದ ಸಹೃದಯ ದಾನಿಗಳಿಗೆ ಕೃತಜ್ಞತೆಗಳು. ಸಹಾಯ ನೀಡಲು ಬಯಸುವವರು ಮತ್ತು ತಮ್ಮ ಮನೆಯ ಮುಂದೆ ಬಾನಿಗಳನ್ನಿಟ್ಟು ನೀರುಣಿಸ ಬಯಸುವವರು ನಮ್ಮನ್ನು ಸಂಪರ್ಕಿಸಿ. ವೀಣಾ ಕುಮಾರ್, ಮೊ. 9110455199.

# 'ಅಘೋರ' ಮಾ.4 ರಂದು ತೆರೆಗೆ

ದಾವಣಗೆರೆ, ಫೆ.24- ಯುವ ನಿರ್ದೇಶಕ ಎನ್.ಎಸ್. ಪ್ರಮೋದ್ ರಾಜ್ ನಿರ್ದೇಶನದ, ಎಂ.ಎನ್. ಪುನೀತ್ ಗೌಡ ನಿರ್ಮಾಣದ, ಡಾ. ವಿ. ನಾಗೇಂದ್ರ ಪ್ರಸಾದ್ ಸಾಹಿತ್ಯ ಮತ್ತು ಸಂಗೀತವಿರುವ 'ಅಘೋರ' ಚಿತ್ರ ಮಾ. 4 ರಂದು ರಾಜ್ಯಾದ್ಯಂತ ತೆರೆ ಕಾಣಲಿದೆ.

ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಿರ್ದೇಶಕ ಎನ್. ಎಸ್.ಪ್ರಮೋದ್ ರಾಜ್ ಅವರು, ಜಗತ್ತಿನಲ್ಲಿ ಪಂಚಭೂತಗಳು ಬಹು ಮುಖ್ಯ. ನಮ್ಮ ದೇಹದಲ್ಲಿಯೂ ಸಹ ಅವು ಮಹತ್ತರ ಪಾತ್ರ ವಹಿಸುತ್ತವೆ. ಈ ವಿಚಾರಗಳನ್ನಿಟ್ಟುಕೊಂಡು ಹಾರರ್ ಶೈಲಿಯಲ್ಲಿ 'ಅಘೋರ' ಚಿತ್ರವನ್ನು ಸಿದ್ಧಪಡಿಸಲಾಗಿದೆ ಎಂದು ಹೇಳಿದರು.

ಅಘೋರ ಎಂದರೆ ಒಂದು ಘಟನೆ. ಅದನ್ನು ಆಧರಿಸಿ ಈ ಸಿನಿಮಾ ಮಾಡಲಾಗಿದೆ. ಚಿತ್ರದಲ್ಲಿ ಹೊಸ ಪ್ರಯತ್ನ ಮಾಡಲಾಗಿದ್ದು, ವಿನೂತನ ಶೈಲಿಯ ಈ ಚಿತ್ರ ಒಂದು ಹಾಡಿಗೆ ಮಾತ್ರ ಸೀಮಿತವಾಗಿದೆ ಎಂದರು.

ಈ ವಿಶ್ವವು ನಮಗೆ ಸಮೃದ್ಧಿಯನ್ನು ನೀಡಿದೆ. ಭೂಮಿ, ಗಾಳಿ, ಬೆಂಕಿ, ನೀರು, ಆಕಾಶ. ಪ್ರಕೃತಿಯು ಪ್ರತಿ ಸಮಯ ಮತ್ತು ಋತುಗಳಲ್ಲಿ ತನ್ನದೇ ಆದ ಕೆಲವು ಸುಂದರವಾದ ಬದಲಾವಣೆಗಳನ್ನು ನೀಡುತ್ತದೆ.ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕಥೆ ಮತ್ತು ಚಿತ್ರಕಥೆಯನ್ನು ಉತ್ತಮವಾಗಿ ಚಿತ್ರಿಸಿದ್ದು, ಚಿತ್ರದಲ್ಲಿ ಆಕಾಶ, ಭೂಮಿ, ಪ್ರಕೃತಿ, ಅಗ್ನಿ ಪಾತ್ರಗಳಾಗಿ ಗುರುತಿಸಲಾಗಿದೆ. ಖ್ಯಾತ ನಟ ಅವಿನಾಶ್ ಅಘೋರಿಯಾಗಿ ಚಿತ್ರದಲ್ಲಿ ನಟಿಸಲಿದ್ದಾರೆ ಎಂದರು.

ಫೆ. 26 ಕ್ಕೆ 'ಅಘೋರ' ಚಿತ್ರದ ಹಾಡು ಬಿಡುಗಡೆಯಾಗಲಿದ್ದು, ಮಾ. 4 ರಂದು ರಾಜ್ಯದ ಸುಮಾರು 250 ರಿಂದ 300 ಚಿತ್ರಮಂದಿರಗಳಲ್ಲಿ ಚಿತ್ರ ತೆರೆ ಕಾಣಲಿದೆ ಎಂದು ತಿಳಿಸಿದರು.

ನಟಿಯರಾದ ರಚನಾ ದಶರಥ್, ದ್ರವ್ಯ ಶೆಟ್ಟಿ, ನಾಯಕ ನಟ ಹಾಗೂ ನಿರ್ಮಾಪಕ ಪುನೀತ್ ಗೌಡ, ಶರತ್ ಜಿ. ಕುಮಾರ್ ಪತ್ರಿಕಾಗೋಷ್ಠಿಯಲ್ಲಿದ್ದರು.

## ಪಿಹೆಚ್‌ಡಿ ಫೆಲೋಶಿಪ್ ಅವಧಿ ವಿಸ್ತರಣೆ

ದಾವಣಗೆರೆ, ಫೆ.24-ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪ್ರಥಮ ವರ್ಷದ ಪೂರ್ಣಾವಧಿ ಪಿಹೆಚ್‌ಡಿ ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವ್ಯಾಸಂಗ ವೇತನ, ಫೆಲೋಶಿಪ್ ಮಂಜೂರಾತಿಗಾಗಿ ಅರ್ಜಿ ಸಲ್ಲಿಸುವ ಅವಧಿಯನ್ನು ಇದೇ ದಿನಾಂಕ 28 ರವರೆಗೆ ವಿಸ್ತರಿಸಲಾಗಿದೆ. ವಿವರಕ್ಕೆ ಸಂಪರ್ಕಿಸಿ : 8050770004.

## 27 ರಿಂದ ಜಿಲ್ಲೆಯಲ್ಲಿ ಪಲ್ಸ್ ಪೋಲಿಯೋ

ದಾವಣಗೆರೆ, ಫೆ.24- ಜಿಲ್ಲೆಯಲ್ಲಿ ಇದೇ ದಿನಾಂಕ 27 ರಿಂದ ಮಾರ್ಚ್ 2 ರವರೆಗೆ 0-5 ವರ್ಷದ ಮಕ್ಕಳಿಗೆ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಡಿಹೆಚ್‌ಓ ತಿಳಿಸಿದ್ದಾರೆ.

# ಸ.ನೌಕರರ ಕ್ರಿಕೆಟ್ ಪಂದ್ಯಾವಳಿ : ಶಿವಮೊಗ್ಗದಲ್ಲಿ ಆಯ್ಕೆ ಪ್ರಕ್ರಿಯೆ

ದಾವಣಗೆರೆ, ಫೆ.24- ದೆಹಲಿಯಲ್ಲಿ ಮಾ. 10 ರಿಂದ 15 ರವರೆಗೆ ಜರುಗಲಿರುವ ಅಖಿಲ ಭಾರತ ನಾಗರಿಕ ಸೇವಾ ಕ್ರಿಕೆಟ್‌ನಲ್ಲಿ ಭಾಗವಹಿಸುವ ಕ್ರೀಡಾಪಟುಗಳ ಆಯ್ಕೆ ಪ್ರಕ್ರಿಯೆ ಫೆ.27 ಮತ್ತು 28 ರಂದು ಶಿವಮೊಗ್ಗದ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣ, ನವಲೆ (ರಾಗಿ ಗುಡ್ಡ) ಇಲ್ಲಿ ನಡೆಸಲಾಗುವುದು. ಜಿಲ್ಲೆಯ ಆಸಕ್ತ ಸರ್ಕಾರಿ ನೌಕರ ಕ್ರೀಡಾಪಟುಗಳು ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಶಿವಮೊಗ್ಗ ಇವರಲ್ಲಿ ಇದೇ ದಿನಾಂಕ 27 ರ ಬೆಳಿಗ್ಗೆ 8 ಗಂಟೆಯೊಳಗಾಗಿ ವರದಿ ಮಾಡಿಕೊಳ್ಳಬೇಕು. ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರ್ಕಾರಿ ನೌಕರರಿಗೆ ಇಲಾಖೆಯಿಂದ ಊಟ, ವಸತಿ ಸೇರಿದಂತೆ, ಯಾವುದೇ ರೀತಿಯ ಭತ್ಯೆಗಳನ್ನು ನೀಡಲಾಗುವುದಿಲ್ಲ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.


ಕರ್ನಾಟಕ ಸರ್ಕಾರ (ಜಲಸಂಪನ್ಮೂಲ ಇಲಾಖೆ)
**ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ನಂ.1, ಜಲಮಾಪನ ವಿಭಾಗ, ರಾಜಘಟ್ಟ ರಸ್ತೆ, ರೈಲ್ವೆ ಸ್ಟೇಷನ್ ಹತ್ತಿರ,ಹಾಸನ, ದೂ: 08172-267539**

**ಟೆಂಡರ್ ಪ್ರಕಟಣೆ ಸಂಖ್ಯೆ- 08/2021-22, ದಿನಾಂಕ: 24-02-2022**

ಕಾರ್ಯಪಾಲಕ ಇಂಜಿನಿಯರ್, ನಂ.1. ಜಲಮಾಪನ ವಿಭಾಗ, ಹಾಸನ ಇವರು ದಾವಣಗೆರೆ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಬರುವ ಮಳೆ ಮಾಪನ ಕೇಂದ್ರಗಳ ಮಾದರೀಕರಣ ಕಾಮಗಾರಿಗಳನ್ನು ನಿರ್ವಹಿಸಲು ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು e-procurement ನಲ್ಲಿ ಕರೆಯಲಾಗಿದೆ. ಹೆಚ್ಚಿನ ಮಾಹಿತಿಗಾಗಿ http://eproc.karnataka.gov.in-eportal/index.seam ನಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ನಂ:1 ಜಲಮಾಪನ ವಿಭಾಗ, ಹಾಸನ



# ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

#1179/1, ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆ, ರಿಂಗ್ ರೋಡ್ ಸರ್ಕಲ್ ಹತ್ತಿರ, ದಾವಣಗೆರೆ-577 004. ಫೋ. : 08192, 225660 & 225049

**ಸಾರ್ವಜನಿಕ ಪ್ರಕಟಣೆ**

ಮೇಲ್ಕಂಡ ನಮ್ಮ ಶಾಖಾ ಕಛೇರಿಗೆ ತಾತ್ಕಾಲಿಕವಾಗಿ ತಿಂಗಳ ಬಾಡಿಗೆ ಕರಾರಿನಂತೆ ಲಘು ಮೋಟರ್ ವಾಹನವನ್ನು ಬಾಡಿಗೆ ಪಡೆಯಲು ಟೆಂಡರ್ ಕರೆಯಲಾಗಿದೆ. ಟೆಂಡರನ್ನು ದಿನಾಂಕ : 2.3.2022ರೊಳಗೆ ಸಲ್ಲಿಸಬಹುದಾಗಿದೆ. ಆಸಕ್ತರು ಹೆಚ್ಚಿನ ವಿವರಗಳಿಗೆ ಶಾಖಾ ಕಛೇರಿಯನ್ನು ಸಂಪರ್ಕಿಸಲು ಕೋರಿದೆ.

ಸಹಿ/- ಶಾಖಾ ವ್ಯವಸ್ಥಾಪಕರು



# ವಿದೇಶ ಪ್ರಯಾಣ ಶುಭ ಹಾರೈಕೆ



ಹರಪನಹಳ್ಳಿ ಶ್ರೀಮತಿ ಶಾರದ ಮತ್ತು ಎಂ. ಕೊಟ್ರೇಶಪ್ಪ ಇವರ ದ್ವಿತೀಯ ಪುತ್ರ

**ಮಂಜುನಾಥ್ ಎಂ.**

ಜರ್ಮನಿಯ Alten, GMBH ಕಂಪನಿಯಲ್ಲಿ ಉದ್ಯೋಗಕ್ಕಾಗಿ ದಿನಾಂಕ 27.02.2022ರ ಭಾನುವಾರದಂದು ವಿದೇಶ ಪ್ರಯಾಣ ಕೈಗೊಂಡಿದ್ದು, ಇವರ ಪ್ರಯಾಣ ಹಾಗೂ ಉದ್ಯೋಗ ಯಶಸ್ವಿಯಾಗಲೆಂದು ಶುಭ ಹಾರೈಸುವವರು

**ಶ್ರೀಮತಿ ಜೆ.ವಿ. ಚಂದ್ರಕಲಾ ಮತ್ತು ಶ್ರೀ ವೀರೇಶ್**
**ಜೆ.ವಿ. ಮಂಜುನಾಥ್, ಜೆ.ವಿ. ರೋಹಿತ್,**
**ಜಿ.ಕೆ. ಗುರುಬಸವರಾಜ್, ಜೆ.ಕೆ. ಶಂಕರ್**



Repco Home Finance We Value Your Dream

# ರೆಪ್ಕೋ ಹೋಮ್ ಫೈನಾನ್ಸ್ ಲಿಮಿಟೆಡ್

CIN No. L65922TN2000TLC044655

ಫೋ : 08192-232836, ಮೊ : 9342440967, 9901009929, 7676823234, 9036368349

## ಗೃಹ ಸಾಲ ಮೇಳ

**ಸರಳ ವಿಧಾನದಲ್ಲಿ ಸಾಲ ಮಂಜೂರಾತಿ**

ದಿ : 25-02-2022 ಶುಕ್ರವಾರ ಮತ್ತು ದಿ: 26-02-2022 ಶನಿವಾರ
ಬೆಳಿಗ್ಗೆ 10 ರಿಂದ ಸಂಜೆ 5 ರ ವರೆಗೆ

ಸ್ಥಳ : ನಂ. 78-7ಎ, ಮೊದಲನೇ ಮಹಡಿ, ನೀಲ್‌ಕಮಲ್ ಫರ್ನಿಚರ್ ಶೋ ರೂಂ ಪಕ್ಕ ರೈತರಬೀದಿ, ಪಿ.ಜೆ. ಬಡಾವಣೆ, ಎ.ವಿ.ಕೆ. ಕಾಲೇಜ್ ರಸ್ತೆ, ದಾವಣಗೆರೆ - 577 002.

ಈ ಕೆಳಕಂಡ ಸಾಲಗಳಿಗೆ ಮಂಜೂರಾತಿ ನೀಡಲಾಗುವುದು :

- ★ ಖಾಲಿ ನಿವೇಶನ /ಮನೆ/ಫ್ಲಾಟ್ ಖರೀದಿಸಲು
- ★ ಮನೆ / ವಾಣಿಜ್ಯ ಕಟ್ಟಡ ಕಟ್ಟಲು
- ★ ಮನೆ ನವೀಕರಣಕ್ಕೆ
- ★ ಹೆಚ್ಚಿನ ಬಡ್ಡಿದರದ ಅಸ್ತಿತ್ವದಲ್ಲಿರುವ ಸಾಲವನ್ನು ಕಡಿಮೆ ಬಡ್ಡಿಗೆ ವರ್ಗಾಯಿಸಲು ಹಾಗೂ ಹೆಚ್ಚುವರಿ ಸಾಲ ಪಡೆಯಲು
- ★ ಅಡಮಾನ ಸಾಲ

ಹಬ್ಬದ ಪ್ರಯುಕ್ತ ವಿಶೇಷ ರಿಯಾಯಿತಿ
ಗೃಹ ಸಾಲ 7.15% ರಿಂದ ಪ್ರಾರಂಭ

ಆಡಳಿತಾತ್ಮಕ ಶುಲ್ಕದಲ್ಲಿ ಸಂಪೂರ್ಣ ಮನ್ನಾ
ಸಂಸ್ಕರಣ ಶುಲ್ಕದಲ್ಲಿ ಶೇ. 0.25 % ವಿಶೇಷ ರಿಯಾಯಿತಿ

★ಷರತ್ತುಗಳು ಅನ್ವಯಿಸುತ್ತವೆ

ಆದಾಯ ಪತ್ರ ಹಾಗೂ ಆಸ್ತಿಯ ವಿವರಗಳೊಂದಿಗೆ ಭೇಟಿ ನೀಡಿ.

**ಮನೆ ಬಾಡಿಗೆಗೆ ಇದೆ**
ಎಂ. ಸಿ. ಕಾಲೋನಿ 'ಬಿ' ಬ್ಲಾಕ್ 3ನೇ ಮೇನ್, 4ನೇ ಕ್ರಾಸ್‌ನಲ್ಲಿ *ಕಡ್ಲಿ ಆಸ್ಪತ್ರೆ ಹತ್ತಿರ 2BHK ಹಾಗೂ ಬೋರ್ ಮತ್ತು ನಲ್ಲಿ ನೀರಿನ ವ್ಯವಸ್ಥೆ ಇರುವ ಮನೆ ಬಾಡಿಗೆಗೆ ಇದೆ. ಆಸಕ್ತರು ವಿಚಾರಿಸಿರಿ 08192 221142
ವಿದ್ಯಾರ್ಥಿಗಳಿಗೆ ಬಾಡಿಗೆಗೆ ಕೊಡುವುದಿಲ್ಲ

**Apartment ಗೆ ಸೈಟುಗಳು ಮಾರಾಟಕ್ಕಿವೆ**
Glass house ಹತ್ತಿರ, ಉತ್ತರ-ದಕ್ಷಿಣ 65x416 (ಹಿಂದೆ-ಮುಂದೆ ರಸ್ತೆ), Glass house ಹಿಂಭಾಗ, ಪೂರ್ವ 30x55, ಪಶ್ಚಿಮ 30x50, ಉತ್ತರ 30x38, ದಕ್ಷಿಣ 30x50.
ಐಗೂರು ವಿಜಯ ಕುಮಾರ್
9945702495

**ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
40x60 East, 20x30 East, 30x40 East 80 ft ರೋಡಿಗೆ (commercial Site)
ರಿಯಲ್ ಎಸ್ಟೇಟ್ ಏಜೆಂಟ್ ಚನ್ನಬಸಪ್ಪ ಐನಳ್ಳಿ
99166 12110

**ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆ ಜಿಲ್ಲೆಯ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡಲು ಪುರುಷ ಮತ್ತು ಮಹಿಳೆಯರು ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಸಂಪರ್ಕಿಸಿ
73490 65434
81056 35506

**ಸಂಪರ್ಕಿಸಿರಿ**
ಯಾವುದಾದರೂ ಕಾರ್ಪೆಂಟರ್ ಕೆಲಸವಿದ್ದರೆ ಸಂಪರ್ಕಿಸಿ.
70229 52782

**ಮನೆ ಬಾಡಿಗೆಗೆ ಇದೆ**
# 63, 1st Main, 1st Cross, ನಿಜಲಿಂಗಪ್ಪ ಲೇ ಔಟ್, ದಾವಣಗೆರೆ. ಸಸ್ಯಹಾರಿಗಳು ಮಾತ್ರ.
98455 67223
98808 27928

**ಮನೆ ಬಾಡಿಗೆಗೆ ಇದೆ**
1ನೇ ಮಹಡಿಯಲ್ಲಿ 2 BHKಯ ಉತ್ತಮ ನೀರು, ಗ್ಯಾಸ್ ಗೀಸರ್ ಕನೆಕ್ಷನ್, ಇಟಾಲಿಯನ್ ಕಿಚನ್‌ವುಳ್ಳ ಮನೆ # 118/1ಸಿ, 34&39, ಎಂ.ಸಿ. ಕಾಂಪ್ಲೆಕ್ಸ್, ಬಿ.ಟಿ. ಲೇಔಟ್‌ನಲ್ಲಿ ವಾಸದ ಮನೆ ಉಪಯೋಗಕ್ಕೆ ಬಾಡಿಗೆಗೆ ದೊರೆಯುತ್ತದೆ.
ನಾಗರಾಜ್, ಮೊ. : 98454 72073
ಮಲ್ಲೇಶ್ ಮೊ. : 78927 89804

**ಸೈಟು ಮಾರಾಟಕ್ಕಿದೆ**
ದಾವಣಗೆರೆ MCC 'B' Block, 12 ನೇ ಮುಖ್ಯ ರಸ್ತೆ, ಸರ್ಕಾರಿ ನಿವೃತ್ತ ನೌಕರರ ಭವನದ ಹತ್ತಿರ, 47x120 ಅಳತೆ, ಒಟ್ಟು 8400 ಅಡಿ ಸೈಟ್ ಮಾರಾಟಕ್ಕಿದೆ.
94483 53127

**ಮನೆಯ ವಾಸ್ತು ಸಮಸ್ಯೆಗಳಿಗೆ ಸುಲಭ ಪರಿಹಾರಗಳು**
ಉತ್ತರಾಭಿಮುಖವಾಗಿ ದೀಪ ಹಚ್ಚಿದರೆ ಧನ ಧಾನ್ಯ ಲಾಭ.(T&C) ಸಂಪರ್ಕಿಸಿ. ಕಲ್ಪತರು ಕನಸ್ಟ್ರಕ್ಷನ್ಸ್ ದಾವಣಗೆರೆ.
98455 83340

**ಹೊಸಮನೆ ಮಾರಾಟಕ್ಕಿದೆ**
ಜೆ.ಎಚ್ ಪಟೇಲ್ ಬಡಾವಣೆಯಲ್ಲಿ ಗ್ರೀನ್ ಬಿಲ್ಡ್ ಡೆವಲಪರ್ಸ್ ನಿರ್ಮಿತ ಉತ್ತರ ದಿಕ್ಕಿನ 20x30 ಸೈಜಿನ ಗ್ರೌಂಡ್ ಮತ್ತು ಫಸ್ಟ್ ಫ್ಲೋರ್ ಪ್ರತ್ಯೇಕದ ಫರ್ನಿಷ್ಡ 2 ಬೆಡ್ರೂಮ್, ಸ್ವಂತ ಬೋರ್‌ವೆಲ್ ಹೊಂದಿದೆ.
63601 09142

**ಅಕ್ವಶೈನ್ RO ವಾಟರ್ ಪ್ಯೂರಿಫೈಯರ್**
ನಮ್ಮಲ್ಲಿ ಎಲ್ಲಾ ಕಂಪನಿಯ ವಾಟರ್ ಪ್ಯೂರಿಫೈಯರ್ ಸೇಲ್ಸ್ ಮತ್ತು ಸರ್ವೀಸ್ ಮಾಡಲಾಗುತ್ತದೆ. ಹೋಲ್‌ಸೇಲ್ ದರದಲ್ಲಿ ಎಲ್ಲಾ ಬಿಡಿಭಾಗಗಳು ಲಭ್ಯವಿರುತ್ತವೆ.
ಫೋ. : 99807 27767

**ಮರು ಮದುವೆ**
ಲಿಂಗಾಯತ ಅಥವಾ ಜಾತಿಯ ಅಭ್ಯಂತರವಿಲ್ಲದ, ಮರು-ಮದುವೆ ಬಯಸುವ ವಿಧವೆ, ವಿಧುರ, ವಿಚ್ಛೇದಿತರ ಹೊಸ ಜೀವನಕ್ಕಾಗಿ, ಅವರವರ ಶಿಕ್ಷಣ ಹಾಗೂ ವಯಸ್ಸಿನ ಅನುಸಾರವಾಗಿ ಹೊಂದಾಣಿಕೆ ಮಾಡಿಕೊಡಲಾಗುವುದು.
98807 29108

**ಹೊಲ ಮಾರಾಟಕ್ಕಿದೆ**
3 ಎಕರೆ 15 ಗುಂಟೆ, ಈ ನಂ.ಗೆ ಸಂಪರ್ಕಿಸಿ. ಜಗಳೂರು
99802 69719

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,450/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000
97392 15000

**ಮತ್ಸ್ಯದ ಮನೆ**
ಮನೆಯಲ್ಲಿಯೇ ತಯಾರಿಸಿದ ಸಮುದ್ರದ ಮೀನಿನ ಆಹಾರಕ್ಕಾಗಿ ಸಂಪರ್ಕಿಸಿ
95133 14666
(ಹೋಂ ಡೆಲಿವರಿ ಮಾತ್ರ)

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ದಿ. 02.03.2022ರ ಬುಧವಾರ ಮತ್ತು 03.03.2022ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**15 ದಿನಗಳಲ್ಲಿ ಪರಿಹಾರ**
ಬಿ.ಪಿ., ಶುಗರ್, ಥೈರಾಯಿಡ್, ಗ್ಯಾಸ್ಟ್ರಿಕ್, ಮಂಡಿ / ಬೆನ್ನು / ಕಾಲು ನೋವು ವೆರಿಕೋಸ್ ವೇನ್ಸ್, ತೂಕದಲ್ಲಿ ಇಳಿಕೆ, ನಿದ್ರಾ ಹೀನತೆ, ಸ್ಟ್ರೋಕ್, ಕಾಲುಬಾವು ಯಾವುದೇ ಸಮಸ್ಯೆಗಳಿಗೆ ನೇರ ಪರಿಹಾರ (T&C) ಉಚಿತ ಥೆರಪಿಗಾಗಿ
86602 35013

**ಹೋಟೆಲ್ /ಮನೆ ಬಿಲ್ಡಿಂಗ್ ಮಾರಾಟಕ್ಕಿದೆ**
ಪಿ.ಬಿ. ರಸ್ತೆ, ಜಿಎಂಐಟಿ ಕಾಲೇಜು ಮುಂದೆ 22 ಅಗಲ 100 ಅಡ್ಡಿ ಉದ್ದ ದಕ್ಷಿಣ ದಿಕ್ಕಿರುವ ಹೋಟೆಲ್ ಮತ್ತು 2 ಬೆಡ್‌ರೂಂ ಮನೆ, 3 ಎಕ್ಸ್‌ಟ್ರಾ ರೂಮ್ ಇರುವ ಬಿಲ್ಡಿಂಗ್ ಮಾರಾಟಕ್ಕಿದೆ.
ಸಂಪರ್ಕಿಸಿ: 90085 25785

**PG / HOSTEL**
Building ಬಾಡಿಗೆಗೆ
15 Rooms with attached Bathrooms + Kitchen & Dining Hall.
Address : 6th Cross, BIET College Road, Near Bapuji High School, Davanagere.
99725 35329, 85531 84854

**ಬೇಕಾಗಿದ್ದಾರೆ**
ಮನೆಯಲ್ಲಿ ಅಡುಗೆ ಮಾಡುವವರು ಬೇಕಾಗಿದ್ದಾರೆ. ಸಮಯ: ಬೆಳಿಗ್ಗೆ 8 ರಿಂದ ಸಂಜೆ 6 ರವರೆಗೆ. ಮನೆ ವಿಳಾಸ: ಹೈಟೆಕ್ ಹಾಸ್ಪಿಟಲ್ ಹತ್ತಿರ. ಆಸಕ್ತಿ ಇರುವ ಹೆಣ್ಣು ಮಕ್ಕಳು ಈ ನಂಬರಿಗೆ ಸಂಪರ್ಕಿಸಿ:
83102 57998

**ವಧು ಬೇಕಾಗಿದೆ**
ವಯಸ್ಸು 38 ವರ್ಷ ಸಾದರ ಲಿಂಗಾಯತ ಮೊದಲನೆ / ಮದುವೆಗೆ ಸಂಪರ್ಕಿಸಿ
93807 61906,
73043 93116

**WANTED**
Telecallers (F), Accoutant (M), Sales Officer (M/F), Works Manager (M), IT Technician, Software Testers / Developers
98444 92888

**ANARGYA ASSOCIATES**
BUILDING Planings 3D Desgins and Material Contractor, competative Price.
95351 11990

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ.
SSLC, PUC, Technical & Non Technical, Pharmacy & BHMS (Government & Private College)
ಕೆಲವೇ ಸೀಟುಗಳು ಲಭ್ಯ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 82173 02649

**ಬಾಡಿಗೆಗೆ / ಉದ್ಯೋಗಾವಕಾಶ**
ಮಳಿಗೆ ಬಾಡಿಗೆಗೆ ಇದೆ. ದುರ್ಗಾಂಬಿಕಾ ಶಾಲೆ ಹತ್ತಿರ (ನಿಟ್ಟುವಳ್ಳಿ ರಸ್ತೆ)
ITI / Diploma ಆಗಿರುವವರು ಕೆಲಸಕ್ಕೆ ಬೇಕಾಗಿದ್ದಾರೆ.
88842 20711
96328 96046

**ಉತ್ತಮ ಗುಣಮಟ್ಟದ ಅಡಿಕೆ ಗೋಟು ಮತ್ತು ಅಡಿಕೆ ಮೊಳಕೆ ಬೀಜಗಳು ದೊರೆಯುತ್ತವೆ**
5 ಕೆಜಿ ಪ್ಯಾಕೆಟ್ ಸಸಿಗಳು ಲಭ್ಯ
ದರ - 100 ರಿಂದ 150 ರೂಪಾಯಿ
ಸ್ಥಳ : ಹೆಚ್. ಕಲಪನಹಳ್ಳಿ.
99456 43545, 99015 58855

**Industrial ಸೈಟ್ ಗಳು ಮಾರಾಟಕ್ಕಿವೆ.**
1) 40x68 ಅಡಿ ಅಳತೆಯ ಜೋಡಿ ಸೈಟುಗಳು ಸೋನಾಲಿಕಾ ಟ್ರಾಕ್ಟರ್ ಶೋ ರೂಮ್ ಹಿಂಭಾಗ, ಪಿ.ಬಿ.ರಸ್ತೆ ದಾವಣಗೆರೆ. 2) 25x88 ಅಥವಾ 50x88 ಅಡಿ ಅಳತೆಯ ಸೈಟು ಸಬ್ ರಿಜಿಸ್ಟ್ರಾರ್ ಎದುರಿನ ಒಳ ರಸ್ತೆ, ದಾವಣಗೆರೆ.
ಮೋಹನ್ ರಿಯಲ್ ಎಸ್ಟೇಟ್ ಏಜೆನ್ಸೀಸ್
97424 34049

**ನವರ್ಣ ತಂತ್ರ ಶಕ್ತಿ**
ಜ್ಯೋತಿಷ್ಯ /ಸಂಖ್ಯಾ /ವಾಸ್ತು /ಹಸ್ತ ಶಾಸ್ತ್ರ ಸ್ತ್ರೀ-ಪುರುಷ ವಶೀಕರಣ, ಗಂಡ - ಹೆಂಡತಿ ಕಿರಿಕಿರಿ ಇದ್ದರೆ ವಶೀಕರಣ ಯಂತ್ರ/ಮಂತ್ರ/ ತಂತ್ರ & 11 ತರಹ ವಿದ್ಯೆಯನ್ನು ಹೇಳಿಕೊಡಲಾಗುವುದು & ಪರಿಹಾರ ಶತಃ ಸಿದ್ಧ.
97409 55345

**SPOKEN ENGLISH JUST 120 HOURS CAN**
CHANGE YOUR LIFE
@VETA Experts in spoken English
98450 40493, 93439 44659

**ಶ್ರೀ ಮುರುಘನ್ ಬೋರ್‌ವೆಲ್ಸ್**
ನಮ್ಮಲ್ಲಿ ಸೂಪರ್ ಫಾಸ್ಟ್ 4.5' ಇಂಚು ಬೋರ್‌ವೆಲ್ ಕೊರೆಯಲಾಗುವುದು. ಮನೆಯ ಒಳಗಡೆ ಮತ್ತು ಹೊರಗಡೆ 300-450 ಅಡಿಯವರೆಗೆ ಕೊರೆಯಲಾಗುವುದು.
99640 78484, 95906 15776


# ಸಂವಿಧಾನದ ಆಶಯಗಳಿಗೆ ಸ್ಪಂದಿಸಲು ಛಲವಾದಿ ಶ್ರೀ ಆಗ್ರಹ



ಬೆಂಗಳೂರು, ಫೆ.24- ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ವರದಿ ಅನುಷ್ಠಾನಗೊಳಿಸುವಂತೆ (ಎಸ್ಸಿ-ಎಸ್ಟಿ ಮೀಸಲಾತಿ ಹೆಚ್ಚಳ) ಮತ್ತು ಸಮುದಾಯದ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ, ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹವು ಗುರುವಾರ 15ನೇ ದಿನಕ್ಕೆ ಕಾಲಿಟ್ಟಿದೆ.

ಈ ದಿನದ ಧರಣಿಯಲ್ಲಿ ಬಳ್ಳಾರಿ ಸಂಸದ ಅರಸೀಕೆರೆ ದೇವೇಂದ್ರಪ್ಪ, ಕೂಡ್ಲಿಗಿ ಶಾಸಕ ಎನ್.ವೈ.ಗೋಪಾಲ ಕೃಷ್ಣ, ಧಾರವಾಡ ಗ್ರಾಮೀಣ ಶಾಸಕ ಅರವಿಂದ ಬೆಲ್ಲದ್, ಬಾದಾಮಿ ಕ್ಷೇತ್ರದ ಮುಖಂಡ ಹನುಮಂತ ಮಾವಿನ ಮರದ ಸೇರಿದಂತೆ ವಿಜಯನಗರ, ಕೊಪ್ಪಳ ಜಿಲ್ಲೆಗಳ ಮುಖಂಡರು ಭಾಗವಹಿಸಿ, ಶ್ರೀಗಳಿಗೆ ಬೆಂಬಲ ವ್ಯಕ್ತಪಡಿಸಿದರು.

ಬುಧವಾರ ಧರಣಿಯಲ್ಲಿ ಭಾಗವಹಿಸಿದ್ದ ಚಿತ್ರದುರ್ಗದ ಛಲವಾದಿ ಗುರುಪೀಠದ ಶ್ರೀ ಬಸವ ನಾಗಿದೇವ ಸ್ವಾಮೀಜಿ ಮಾತನಾಡಿ, ಸಂವಿಧಾನದ ಆಶಯಗಳನ್ನು ಕಾಲ ಕಾಲಕ್ಕೆ ಜಾರಿಗೊಳಿಸುವ ಜವಾಬ್ದಾರಿ ನಮ್ಮನ್ನಾಳುವ ಸರ್ಕಾರಗಳ ಮೇಲಿದೆ. ರಾಜನಹಳ್ಳಿ ಶ್ರೀಗಳ ಬೇಡಿಕೆ ನ್ಯಾಯಬದ್ಧವಾಗಿದ್ದು, ರಾಜ್ಯ ಸರ್ಕಾರ ತಡಮಾಡದೇ ಬೇಡಿಕೆಗಳ ಈಡೇರಿಕೆಗೆ ಮುಂದಾಗಬೇಕೆಂದು ಆಗ್ರಹಿಸಿದರು.

ಗಂಗಾವತಿ ಶಾಸಕ ಪರಣ್ಣ ಮುನವಳ್ಳಿ, ವಿಧಾನ ಪರಿಷತ್ ಸದಸ್ಯ ಹನುಮಂತ ನಿರಾಣಿ, ಪ್ರೊ. ಸುಂಕನೂರು, ದಾವಣಗೆರೆ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಹರಿಹರ ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಡಿಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಹರಿಹರ ತಾ. ನಾಯಕ ಸಮಾಜದ ಅಧ್ಯಕ್ಷ ಜಿಗಳಿ ರಂಗಪ್ಪ, ರಾಜ್ಯ

## 15ನೇ ದಿನಕ್ಕೆ ಕಾಲಿಟ್ಟ ರಾಜನಹಳ್ಳಿ ಶ್ರೀಗಳ ಧರಣಿ

ಇರುಳಿಗ ಸಮಾಜದ ರಾಜ್ಯಾಧ್ಯಕ್ಷ ಕೃಷ್ಣಮೂರ್ತಿ, ದಲಿತ ಮುಖಂಡ ಶ್ರೀನಿವಾಸ್, ಕೊರಮ ಸಮುದಾಯದ ಆನಂದ್‌ಕುಮಾರ್, ಬೇಡರ ಕಣ್ಣಪ್ಪ ಟ್ರಸ್ಟ್ ಗೌರವಾಧ್ಯಕ್ಷ ಎಲ್. ಮುನಿಸ್ವಾಮಿ, ಗಂಗಾವತಿಯ ವೀರಭದ್ರನಾಯಕ, ಚಿತ್ರದುರ್ಗದ ಕಾಂಗ್ರೆಸ್ ಮುಖಂಡ ಷಣ್ಮುಖಪ್ಪ ಹನುಮಲಿ ಮತ್ತಿತರರು ಧರಣಿಯಲ್ಲಿ ಪಾಲ್ಗೊಂಡು ಮಾತನಾಡಿ ಶ್ರೀಗಳ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಬಿಬಿಎಂಪಿ ಮಾಜಿ ಸದಸ್ಯ ನರಸಿಂಹ ನಾಯಕ, ಯುವ ಮುಖಂಡ ತುಳಸಿರಾಮ್, ನಿವೃತ್ತ ಎಸಿಪಿ ಪಂಪಾಪತಿ, ಜೋಗದ ನಾರಾಯಣಪ್ಪ, ಮುಖಂಡರಾದ ಹೊದಿಗೆರೆ ರಮೇಶ್, ಹರ್ತಿಕೋಟೆ ವೀರೇಂದ್ರ ಸಿಂಹ, ದೇವರಬೆಳಕೆರೆ ಮಹೇಶ್ವರಪ್ಪ, ಕೊಕ್ಕನೂರು ಸೋಮಶೇಖರ್, ರಾಘು ದೊಡ್ಮನಿ, ಪತ್ರಕರ್ತ ಜಿಗಳಿ ಪ್ರಕಾಶ್ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

# ಅಧಿವೇಶನದ ಅಮೂಲ್ಯ ಸಮಯ ಹಾಳು ಮಾಡುತ್ತಿರುವ ಕಾಂಗ್ರೆಸ್

ದಾವಣಗೆರೆ, ಫೆ.24- ಕಾಂಗ್ರೆಸ್ ಶಾಸಕರು, ನಾಯಕರು ಸಚಿವ ಕೆ.ಎಸ್. ಈಶ್ವರಪ್ಪ ಅವರ ರಾಷ್ಟ್ರಧ್ವಜದ ಹೇಳಿಕೆಯನ್ನೇ ನೆಪವಾಗಿಟ್ಟುಕೊಂಡು ಸದನದಲ್ಲಿ ಗೊಂದಲ ಸೃಷ್ಟಿ ಮಾಡಿ ಅತೀವ ನಾಟಕ ಮಾಡುವ ಮೂಲಕ ಅಧಿವೇಶನ ಹಾಳು ಮಾಡುತ್ತಿದ್ದಾರೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ಸುದ್ದಿಗೋಷ್ಠಿಯಲ್ಲಿ ಕಿಡಿ ಕಾರಿದರು.

ರಾಜ್ಯದ ಅಭಿವೃದ್ಧಿ ಕಾರ್ಯಗಳ ಬಗ್ಗೆ, ರೈತರು, ಕಾರ್ಮಿಕರು, ವಿದ್ಯಾರ್ಥಿಗಳ ಸಮಸ್ಯೆ, ಕುಡಿಯುವ ನೀರು ಇತ್ಯಾದಿ ವಿಷಯಗಳ ಬಗ್ಗೆ ಚರ್ಚಿಸುವ ಬದಲು, ಅಧಿವೇಶನದ ಅಮೂಲ್ಯ ಸಮಯವನ್ನು ವಿನಾಕಾರಣ ಕಾಲ ಹಾಳು ಮಾಡುತ್ತಿದ್ದಾರೆ ಎಂದು ದೂರಿದರು.

ಶಾಲಾ-ಕಾಲೇಜುಗಳಲ್ಲಿ ಹಿಜಾಬ್ ವಿಚಾರದಲ್ಲಿ ನಡೆಯುತ್ತಿರುವ ಗೊಂದಲ, ಪ್ರತಿಭಟನೆ, ಗಲಾಟೆಗಳಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕಾಂಗ್ರೆಸ್ ಕಾರಣ ಎಂದರು.

ಕಾಂಗ್ರೆಸ್ ನಾಯಕರು ಕೇವಲ ಅಲ್ಪಸಂಖ್ಯಾತರ ಓಲೈಕೆಗಾಗಿ ಪರ ಮತ್ತು ವಿರೋಧದ ಹೇಳಿಕೆ ನೀಡುತ್ತಿದ್ದಾರೆ. ಚರ್ಚೆಗೆ ಯಾವ ವಿಷಯ ಸಿಗದ ಕಾರಣ ಸಚಿವ ಈಶ್ವರಪ್ಪ ಅವರ ಹೇಳಿಕೆ ವಿರೋಧಿಸಿ, ಅಹೋರಾತ್ರಿ ಧರಣಿ ಮಾಡುವ ಮೂಲಕ ರಾಜ್ಯದ ಜನತೆ ಮುಂದೆ ಕಾಂಗ್ರೆಸ್ ಪಕ್ಷ ಹಾಸ್ಯಾಸ್ಪದಕ್ಕೀಡಾಗಿದೆ ಎಂದು ಹೇಳಿದರು.

ತಮ್ಮಲ್ಲಿರುವ ಕಿತ್ತಾಟಗಳನ್ನು ಮರೆಮಾಚಲು ಈ ರೀತಿಯ ಪ್ರತಿಭಟನೆ, ಧರಣಿಯ ನಾಟಕವಾಡುತ್ತಿದ್ದಾರೆ. ಇದಕ್ಕೆ ಕಾಂಗ್ರೆಸ್ ನಾಯಕರಲ್ಲಿನ ನೈತಿಕ ಹಾಗೂ ಬೌದ್ಧಿಕ ದಿವಾಳಿತನ ಕಾರಣವಾಗಿದೆ. ಬರೀ ಢೋಂಗಿ ರಾಷ್ಟ್ರಭಕ್ತಿಯನ್ನು ಪ್ರದರ್ಶಿಸುತ್ತಿದ್ದಾರೆ ಎಂದು ಲೇವಡಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ವಕ್ತಾರ ಡಿ.ಎಸ್. ಶಿವಶಂಕರ್, ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ಮುಖಂಡ ಮಂಜಾನಾಯ್ಕ, ವಿಶ್ವಾಸ್ ಉಪಸ್ಥಿತರಿದ್ದರು.

# ನಾಳೆ 'ಜಲಸಿರಿಯ ಸೊಬಗು' ಬಿಡುಗಡೆ

ದಾವಣಗೆರೆ, ಫೆ.24-ಗಿರಿಶೈಲ ಪ್ರಕಾಶನ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಸಾಹಿತಿ ಶ್ರೀಮತಿ ಟಿ.ಎಸ್. ಶೈಲಜಾ ಅವರ 'ಜಲಸಿರಿಯ ಸೊಬಗು' (ಜಲಪಾತಗಳ ಸುತ್ತ ಒಂದು ನೋಟ) ಪುಸ್ತಕ ಬಿಡುಗಡೆ ಸಮಾರಂಭ ನಾಡಿದ್ದು ದಿನಾಂಕ 26 ರಂದು ಸಂಜೆ 5 ಗಂಟೆಗೆ ನಗರದ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ ಎಂದು ಸಾಹಿತಿ ಶ್ರೀಮತಿ ಮಲ್ಲಮ್ಮ ನಾಗರಾಜ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಚಿತ್ರದುರ್ಗದ ಹಿರಿಯ ಸಾಹಿತಿ ಡಾ. ತಾರಿಣಿ ಶುಭದಾಯಿನಿ ಪುಸ್ತಕ ಬಿಡುಗಡೆ ಮಾಡುವರು. ನಿವೃತ್ತ ಪ್ರಾಧ್ಯಾಪಕರೂ, ಜಾನಪದ ಚಿಂತಕ ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ ಪುಸ್ತಕ ಕುರಿತು ಮಾತನಾಡಲಿದ್ದಾರೆ. ಜಾನಪದ ವಿದ್ವಾಂಸರೂ, ಶಿಕ್ಷಣ ತಜ್ಞ ಡಾ. ಎಂ.ಜಿ. ಈಶ್ವರಪ್ಪ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದು, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಟಿ.ಎಸ್. ಶೈಲಜಾ ಲೇಖಕರ ನುಡಿ ನುಡಿಯಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಟಿ.ಎಸ್. ಶೈಲಜಾ, ನೀಲಗುಂದ ಜಯ್ಯಮ್ಮ, ವೀಣಾ ಕೃಷ್ಣಮೂರ್ತಿ, ಸುಷ್ಮಾ ಉಪಸ್ಥಿತರಿದ್ದರು.

# ಧೂಮಪಾನದಿಂದ ದೂರವಿದ್ದು, ಹೃದಯಾಘಾತ ತಪ್ಪಿಸಿಕೊಳ್ಳಬಹುದು

## ಮಲೇಬೆನ್ನೂರು : ಹೃದಯ ತಪಾಸಣೆ ಶಿಬಿರದಲ್ಲಿ ಡಾ. ಗುರುರಾಜ್ ಸಲಹೆ



ಮಲೇಬೆನ್ನೂರು, ಫೆ.24- ಸಕ್ಕರೆ, ಬಿಪಿ ಕಾಯಿಲೆ ಪ್ರಮಾಣ ಮತ್ತು ರಕ್ತದಲ್ಲಿನ ಕಬ್ಬಿಣ ಅಂಶ ಹೆಚ್ಚಾಗುವುದರಿಂದ ಹೃದಯಾಘಾತ ಸಂಭವಿಸಲಿದೆ ಎಂದು ದಾವಣಗೆರೆಯ ಎಸ್.ಎಸ್.ನಾರಾಯಣ ಹಾರ್ಟ್ ಸೆಂಟರ್‌ನ ಹೃದಯ ರೋಗ ತಜ್ಞ ಡಾ. ಗುರುರಾಜ್ ಹೇಳಿದರು.

ಅವರು ಗುರುವಾರ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಲಯನ್ಸ್ ಕ್ಲಬ್ (ಮಲೇಬೆನ್ನೂರು) ಮತ್ತು ಹರಿಹರ ತಾ. ಆರೋಗ್ಯಾಧಿಕಾರಿಗಳ ಕಚೇರಿ ಹಾಗೂ ಎಸ್.ಎಸ್.ನಾರಾಯಣ ಹಾರ್ಟ್ ಸೆಂಟರ್ (ದಾವಣಗೆರೆ) ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಉಚಿತ ಹೃದಯ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿದರು.

ಧೂಮಪಾನದಿಂದ ದೂರವಿದ್ದು, ನಿಯಮಿತವಾಗಿ ಆಹಾರ ಸೇವನೆ ಹಾಗೂ ವ್ಯಾಯಾಮ ಮಾಡುವುದರಿಂದ ಹೃದಯಾಘಾತದಿಂದ ದೂರು ಇರಬಹುದೆಂದ ಡಾ. ಗುರುರಾಜ್ ಅವರು, ಎದೆ ಉರಿ, ನೋವು ಬಂದರೆ ನಿರ್ಲಕ್ಷ್ಯ ಮಾಡದೇ ಸಮೀಪದ ವೈದ್ಯರ ಬಳಿ ತಪಾಸಣೆಗೆ ಒಳಗಾಗಿ ಎಂದು ಮನವಿ ಮಾಡಿದರು.

ಕಣ್ಣು, ಕಿವಿ, ಕೈ-ಕಾಲು ಇಲ್ಲದಿದ್ದರೂ ಮನುಷ್ಯ ಹೇಗೋ ಜೀವನ ನಡೆಸುತ್ತಾನೆ. ಆದರೆ, ಹೃದಯ ಬಡಿತ ನಿಂತು ಹೋದರೆ ಮನುಷ್ಯ ಒಂದು ಕ್ಷಣವೂ ಬದುಕುವುದಿಲ್ಲ ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಂಡು ಹೃದಯ ಕಾಯಿಲೆ ಬರದಂತೆ ಜಾಗೃತಿ ವಹಿಸಬೇಕೆಂದು ಲಯನ್ಸ್ ಮಾಜಿ ಗೌವರ್ನರ್ ಡಾ. ಟಿ. ಬಸವರಾಜ್ ತಿಳಿಸಿದರು.

ತಾ. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಉಮ್ಮಣ್ಣ ಮಾತನಾಡಿ, ಮಲೇಬೆನ್ನೂರು ಲಯನ್ಸ್ ಕ್ಲಬ್ ಈ ಭಾಗದ ಜನರಿಗೆ ಅಗತ್ಯ ಸೌಲಭ್ಯ ಹಾಗೂ ವಿಶೇಷವಾಗಿ ಆರೋಗ್ಯದ ಅರಿವಿನ ಬಗ್ಗೆ ಹೆಚ್ಚಿನ ಒತ್ತು ನೀಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಲಯನ್ಸ್ ಕ್ಲಬ್ ಅಧ್ಯಕ್ಷೆ ಶ್ರೀಮತಿ ರೋಹಿಣಿ ಜಗದೀಶ್ವರ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

ಲಯನ್ಸ್ ಕ್ಲಬ್ ಕಾರ್ಯದರ್ಶಿ ಶ್ರೀಮತಿ ರೂಪಾ ಪಾಟೀಲ್, ಖಜಾಂಚಿ ಶ್ರೀಮತಿ ಪಾರ್ವತಮ್ಮ ಮರುಳಸಿದ್ದಪ್ಪ, ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷರಾದ ಓ.ಜಿ.ರುದ್ರಗೌಡ್ರು, ಎನ್.ಜಿ.ಶಿವಾಜಿ ಪಾಟೀಲ್, ಡಾ. ಹೆಚ್.ಜೆ.ಚಂದ್ರಕಾಂತ್, ಬಿ.ಎಂ.ಜಗದೀಶ್ವರ ಸ್ವಾಮಿ, ಹೆಚ್. ಜಿ.ಚಂದ್ರಶೇಖರ್, ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ, ಆರೋಗ್ಯ ರಕ್ಷಾ ಸಮಿತಿ ಸದಸ್ಯ ಬಿ.ಮಂಜುನಾಥ್ ಮತ್ತಿತರರು ಭಾಗವಹಿಸಿದ್ದರು. ಶಿಬಿರದಲ್ಲಿ 300 ಕ್ಕೂ ಹೆಚ್ಚು ಜನ ಹೃದಯ ತಪಾಸಣೆಗೆ ಒಳಗಾದರು.

# ವಿದ್ಯಾ ಕ್ಷೇತ್ರದಲ್ಲಿ ರಾಜಕೀಯ ಪ್ರವೇಶ ಸಲ್ಲದು : ರಂಭಾಪುರಿ ಶ್ರೀ



ಹರಪನಹಳ್ಳಿ, ಫೆ.24- ಮನೆಯಲ್ಲಿರುವಾಗ ಅವರವರ ಧರ್ಮದ ಆಚರಣೆಗಳನ್ನು ಮಾಡಲಿಕ್ಕೆ ಸಂವಿಧಾನದಡಿಯಲ್ಲಿ ಎಲ್ಲರಿಗೂ ಅವಕಾಶ ಕೊಟ್ಟಿದೆ. ಆದರೆ ಶೈಕ್ಷಣಿಕ ಕ್ಷೇತ್ರದಲ್ಲಿ ಮಾತ್ರ ಸಮವಸ್ತ್ರ ಧರಿಸಿಯೇ ಹೋಗಬೇಕು ಎನ್ನುವ ಭಾವನೆ ನಮ್ಮದಾಗಿದೆ ಎಂದು ಬಾಳೆಹೊನ್ನೂರು ರಂಭಾಪುರಿ ಶ್ರೀ ಪ್ರಸನ್ನ ರೇಣುಕಾ ವೀರ ಸೋಮೇಶ್ವರ ರಾಜದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಪಟ್ಟಣದ ಹೊರವಲಯದಲ್ಲಿರುವ ಕೆ.ಎಂ. ಬಸವರಾಜಯ್ಯನವರ ನೂತನ ಮಯೂರಿ ಫಾರ್ಮ್‌ಹೌಸ್ ಉದ್ಘಾಟಿಸಿ, ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿದ್ಯಾಕ್ಷೇತ್ರದಲ್ಲಿ ಯಾವತ್ತು ಕೂಡ ರಾಜಕೀಯ ಪ್ರವೇಶ ಮಾಡಬಾರದು, ವಿದ್ಯೆಯನ್ನು ಸಂಪಾದಿಸುವ ವಿಚಾರದಲ್ಲಿ ಮಕ್ಕಳ ಮನಸ್ಸು ಇರಬೇಕೇ ವಿನಃ, ಮಕ್ಕಳು ಹಿಜಾಬ್ ಬಟ್ಟೆ ಹಾಗೂ ಶಾಲು ಧರಿಸುವಂತಹ ಹಠಕ್ಕೆ ಬೀಳುವಂತಹ ಕೆಲಸವನ್ನು ಯಾರೂ ಮಾಡಬಾರದು. ಈ ಬಗ್ಗೆ ಈಗಾಗಲೇ ನ್ಯಾಯಾಲಯವು ಸಮವಸ್ತ್ರ ಧರಿಸಿ ಬರಬೇಕು ಎನ್ನುವ ತೀರ್ಪಿಗೆ ಎಲ್ಲರೂ ಬದ್ಧರಾಗಬೇಕು. ನ್ಯಾಯಾಲಯದ ಮಧ್ಯಂತರ ತೀರ್ಪಿಗೆ ಎಲ್ಲರೂ ಪಾಲನೆ ಮಾಡಬೇಕು, ಪೂರ್ಣ ತೀರ್ಪು ಬರುವವರೆಗೂ ಎಲ್ಲರೂ ಸಂಯಮ, ಶಾಂತಿ ಕಾಪಾಡಿಕೊಳ್ಳಬೇಕು ಎಂದು ಅವರು ಹೇಳಿದರು.

ಹಿಂದೂ ಸಂಸ್ಕೃತಿಯನ್ನು ವಿರೋಧಿಸುವ ಕೆಲವು ರಾಜಕೀಯ ಶಕ್ತಿಗಳು ದುಷ್ಟ ಪ್ರವೃತ್ತಿಗೆ ಇಳಿದಿರುವುದು ಖೇದದ ಸಂಗತಿ. ಬಹುಷ ಹಿಂದೂ ರಾಷ್ಟ್ರದಲ್ಲಿ ಹಿಂದೂಗಳಿಗೆ ಜೀವದ ಭಯ ಇದೆ ಎಂದರೆ, ಬಹಳ ನೋವಿನ ಸಂಗತಿ. ಇತ್ತೀಚೆಗೆ ಶಿವಮೊಗ್ಗದಲ್ಲಿ ನಡೆದಿರುವ ಹರ್ಷನ ಹತ್ಯೆಯ ಘಟನೆ ಇದಕ್ಕೆ ಸಾಕ್ಷಿಯಾಗಿದೆ. ಹಿಂದೂ ಸಮಾಜದಲ್ಲಿ ಸಮಗ್ರವಾದ ಐಕ್ಯತೆ ಇಲ್ಲದೇ ಇರುವುದು ಮತ್ತು ಯಾವುದೇ ವಿಚಾರವನ್ನು ಹಿಂದೂಗಳು ಗಂಭೀರವಾಗಿ ಆಲೋಚನೆ ಮಾಡದಿರುವುದೇ ಇಂತಹ ಘಟನೆಗಳಿಗೆ ಕಾರಣ. ಮುಂದೆ ಇಂತಹ ಘಟನೆಗಳು ನಡೆಯಲಾರದಂತೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿ ಎಂದರು.

ವಿರೋಧ ಪಕ್ಷಗಳು ಸದನದಲ್ಲಿ ಧರಣಿ, ಸತ್ಯಾಗ್ರಹ ತಮ್ಮ ಹೊಣೆಗಾರಿಕೆಯನ್ನು ಮರೆಯಬಾರದು. ನಾಡಿನಲ್ಲಿ ಜ್ವಲಂತ ಸಮಸ್ಯೆಗಳು ಬೇಕಾದಷ್ಟು ಇವೆ. ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ರಾಜಕಾರಣಿಗಳು ಗಮನ ಹರಿಸಬೇಕೇ ಹೊರತು, ಪರಸ್ಪರ ರಾಜಕೀಯ ಕೆಸರೆರೆಚಾಟದಲ್ಲಿ ತೊಡಗಿಸಿಕೊಳ್ಳಬಾರದು ಎಂದರು.

ರಾಷ್ಟ್ರಧ್ವಜ ಕುರಿತು ಯಾರೇ ಆಗಿರಲಿ ಅಪಮಾನ, ಅಗೌರವ ಮಾಡುವಂತಹ ಕೆಲಸ ಮಾಡಬಾರದು. ರಾಷ್ಟ್ರಧ್ವಜ ಹೊರತು ಪಡಿಸಿ ಯಾವುದೇ ಧ್ವಜ ಹಾರಲಿಕ್ಕೆ ಅವಕಾಶ ಕೊಡಬಾರದು. ಕೆಂಪು ಕೋಟೆಯ ಮೇಲೆ ಇತರೆ ಯಾವುದೇ ಸಮುದಾಯ, ವರ್ಗದ ಧ್ವಜ ಹಾರಬಾರದು. ಇವತ್ತು ದೇಶದಲ್ಲಿ ಸಾಮರಸ್ಯ ಕಾಪಾಡುವ ಸಂವಿಧಾನವಿದ್ದು, ಅದರಂತೆ ಎಲ್ಲರೂ ನಡೆದುಕೊಂಡು ಹೋಗಬೇಕು ಎಂದರು.

ಈ ಸಂದರ್ಭದಲ್ಲಿ ತೆಗ್ಗಿನಮಠ ಸಂಸ್ಥಾನದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ, ಹಂಪಸಾಗರ ನವಲಿ ಹಿರೇಮಠ ಶ್ರೀ ಅಭಿನವ ಶಿವಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಎ.ಪಿ.ಎಂ.ಸಿ ಮಾಜಿ ಅಧ್ಯಕ್ಷ ಕೆ.ಎಂ.ಬಸವರಾಜಯ್ಯ, ಮುಖಂಡರಾದ ಕೆ.ಎಂ.ವಾಗೀಶ್, ಅಂಬ್ಲಿ ಮಂಜುನಾಥ್, ಮುದಗಲ್ ಗುರುನಾಥ್, ಸುಮೇರ್ ಮಲ್ ಜೈನ್, ಗೌತಮ್ ಚಂದ್, ಕಾಂತಿಲಾಲ್, ಎಸ್.ಎಂ. ವೀರಭದ್ರಯ್ಯ, ಸದೋಜಾತಯ್ಯ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ರಷ್ಯಾ ದಾಳಿಯಿಂದ ಯುರೋಪ್ ಶಾಂತಿ ಭಗ್ನ

ಕೈವ್, ಜ. 24 – ಉಕ್ರೇನ್‌ನ ಹಲವು ನಗರಗಳು ಹಾಗೂ ಸೈನಿಕ ತಾಣಗಳ ಮೇಲೆ ರಷ್ಯಾ ಶೆಲ್ ಹಾಗೂ ವೈಮಾನಿಕ ದಾಳಿ ನಡೆಸಿದೆ. ನಾಗರಿಕರು ರೈಲು ಹಾಗೂ ಕಾರುಗಳ ಮೂಲಕ ದೇಶ ತೊರೆಯುವ ಯತ್ನ ನಡೆಸಿದ್ದಾರೆ.

1979ರ ಆಫ್ಘಾನಿಸ್ತಾನ ದಾಳಿಯ ನಂತರ ರಷ್ಯಾ ಮೊದಲ ಬಾರಿಗೆ ಅತ್ಯಂತ ಆಕ್ರಮಣಕಾರಿ ಕ್ರಮ ತೆಗೆದುಕೊಂಡಿದೆ. ಇದರಿಂದಾಗಿ ಯುರೋಪ್‌ನ ಶಾಂತಿ ನುಚ್ಚುನೂರಾಗಿದೆ.

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುತಿನ್ ಅಣ್ವಸ್ತ್ರದ ಬೆದರಿಕೆ ಹಾಕಿರುವುದು ವಿಶ್ವದ ಇತರೆ ರಾಷ್ಟ್ರಗಳ ಆಕ್ರೋಶಕ್ಕೆ ಕಾರಣವಾಗಿದೆ.

ಈ ನಡುವೆ, ಚರ್ನೋಬಿಲ್ ಅಣು ಘಟಕಕ್ಕೆ ಮುತ್ತಿಗೆ ಹಾಕಲು ರಷ್ಯಾ ಪಡೆಗಳು ಪ್ರಯತ್ನಿಸುತ್ತಿರುವ ಆರೋಪ ಕೇಳಿ ಬಂದಿದೆ. ವ್ಯೂಹಾತ್ಮಕವಾಗಿ ಮಹತ್ವವಾಗಿರುವ ವಿಮಾನ ನಿಲ್ದಾಣ ನಿಯಂತ್ರಣಕ್ಕಾಗಿ ಉಕ್ರೇನ್ ರಾಜಧಾನಿ ಕೈವ್‌ಗೆ ಕೆಲವೇ ಕಿ.ಮೀ. ದೂರದಲ್ಲಿ ಹೋರಾಟ ನಡೆಯುತ್ತಿದೆ. ರಷ್ಯಾ ದಾಳಿಯಿದಾಗಿ ಯುರೋಪ್‌ನ ಶಾಂತಿ ಭಗ್ನವಾಗಿದೆ ಎಂದು ನ್ಯಾಟೋ ಒಕ್ಕೂಟ ಹೇಳಿದೆ. ಅಮೆರಿಕ ಹಾಗೂ ಯುರೋಪ್ ಅಷ್ಟೇ ಅಲ್ಲದೇ, ದಕ್ಷಿಣ ಕೊರಿಯಾ ಹಾಗೂ ಆಸ್ಟ್ರೇಲಿಯಾಗಳೂ ಸಹ ದಾಳಿಯನ್ನು ಖಂಡಿಸಿವೆ. ರಷ್ಯಾದ ಅಧ್ಯಕ್ಷ ಪುತಿನ್ ಹತ್ತಿರದವರೆಂದು ಗುರುತಿಸಲಾಗುವ ಹಂಗೇರಿಯ ವಿಕ್ಟ್ ಒರ್ಬಾನ್ ಸಹ ದಾಳಿಯನ್ನು ಖಂಡಿಸಿದ್ದಾರೆ.

# ಹರ್ಷನ ಹತ್ಯೆ : ಭಾವಸಾರ ಕ್ಷತ್ರಿಯ ಸಮಾಜದ ಶೋಕ




ದಾವಣಗೆರೆ, ಫೆ.24- ಶಿವಮೊಗ್ಗದಲ್ಲಿ ನಡೆದ ಹರ್ಷನ ಕಗ್ಗೊಲೆಯನ್ನು ಖಂಡಿಸಿ, ಮೃತನ ಆತ್ಮಕ್ಕೆ ಶಾಂತಿ ಕೋರಿ ಭಾವಸಾರ ಕ್ಷತ್ರಿಯ ಸಮಾಜದ ವತಿಯಿಂದ ನಗರದ ಜಯದೇವ ವೃತ್ತದಲ್ಲಿ ಬುಧವಾರ ಸಂಜೆ ಮೇಣದ ಬೆಳಕು ಮೂಡಿಸಿ, ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಹರ್ಷನು ಯುವ ಭಜರಂಗ ದಳದ ನಿಷ್ಠಾವಂತ ಕಾರ್ಯಕರ್ತನಾಗಿದ್ದು, ದೇಶಭಕ್ತಿ, ದೇಶಾಭಿಮಾನ ಉಳ್ಳವನಾಗಿದ್ದ. ಇಂತಹ ದೇಶಭಕ್ತ, ಅಮಾಯಕನ ಹತ್ಯೆಯಿಂದ ದೇಶಕ್ಕೆ, ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಸಮಾಜದ ಮುಖಂಡರು ಸ್ಮರಿಸಿದರು.

ಹರ್ಷನ ಕುಟುಂಬಕ್ಕೆ ಸರ್ಕಾರ ಪರಿಹಾರ ಧನ ನೀಡಬೇಕು. ಅಲ್ಲದೇ ಕುಟುಂಬಕ್ಕೆ ಆತನ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ಪಾಂಡುರಂಗ ದಯಪಾಲಿಸಲಿ, ಹರ್ಷ ಜಿಂಗಾಡೆ ಆತ್ಮಕ್ಕೆ ಚಿರಶಾಂತಿ ಸಿಗಲಿ. ಮಾತ್ರವಲ್ಲ ಹತ್ಯೆಗೈದ ದುಷ್ಕರ್ಮಿಗಳಿಗೆ ಕಠಿಣ ಗಲ್ಲುಶಿಕ್ಷೆ ನೀಡಬೇಕೆಂದು ಆಗ್ರಹಿಸಿದರು.

ಕೊಲೆ ಪ್ರಕರಣವನ್ನು ಎನ್‌ಐಎ ತನಿಖೆಗೆ ವಹಿಸುವಂತೆ ರಾಜ್ಯದ ಮುಖ್ಯಮಂತ್ರಿ ಮತ್ತು ಗೃಹ ಸಚಿವರಿಗೆ ಒತ್ತಾಯಿಸಿ, ಇದೇ ವೇಳೆ ಭಾವಸಾರ ಕ್ಷತ್ರಿಯ ಸಮಾಜದಿಂದ ಮನವಿ ಪತ್ರ ಸಲ್ಲಿಸಲು ಸಹಿ ಸಂಗ್ರಹಿಸಲಾಯಿತು.

ಈ ವೇಳೆ ಸಮಾಜದ ಮುಖಂಡರಾದ ಅರುಣ್ ಗುಜ್ಜರ್, ರಘು ಜಯಪ್ರಕಾಶ್ ಅಂಬರ್‌ಕರ್, ರಮೇಶ್ ತೇಲ್ಕರ್, ವಿಜಯ್ ಕುಮಾರ್ ಟಿಕಾರೆ, ನಿಂಗೋಜಿ ರಾವ್ ಗುಜ್ಜರ್, ರಮೇಶ್ ಬಾಬು, ಚಂದ್ರಕಾಂತ ವಾದೋನಿ, ವಿಜಯ್ ವಾದೋನಿ, ವಿನಯ್ ಜಿಂಗಾಡೆ, ರೂಪೇಶ್ ತೇಲ್ಕರ್, ಪಾಂಡುರಂಗ ಗಡ್ಡಾಳೆ, ಕಸ್ತೂರಿ ಬಾಯಿ ಗುಜ್ಜರ್ ಇತರರು ಮಾತನಾಡಿದರು.

ಭಾವಸಾರ ಕ್ಷತ್ರಿಯ ದೈವ ಮಂಡಳಿ, ಭಾವಸಾರ ವಿಜನ್ ಇಂಡಿಯಾ, ಸಿಟಿ ಭಾವಸಾರ ಕ್ಷತ್ರಿಯ ಸಮಾಜದ ಪದಾಧಿಕಾರಿಗಳು, ಭಜನಾ ಮಂಡಳಿ ಸಮಿತಿ, ತರುಣ ಮಂಡಳದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಕಲಾವತಿ ಮಹಿಳಾ ಮಂಡಳಿ ಪದಾಧಿಕಾರಿಗಳು, ದುರ್ಗಾದೇವಿ ಮಹಿಳಾ ಮಂಡಳಿಯ ಪದಾಧಿಕಾರಿಗಳು ಹಾಗೂ ಸಮಾಜ ಬಾಂಧವರು ಪಾಲ್ಗೊಂಡಿದ್ದರು.







# ಹೃದಯಪೂರ್ವಕ ಕೃತಜ್ಞತೆಗಳು

ನಮ್ಮ ಸಂಸ್ಥೆಗೆ ನಾಗರಿಕ ಸೌಲಭ್ಯವುಳ್ಳ ಸಿಎ ಸೈಟ್ ನೀಡುವಂತೆ
**ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ**
ಶಿಫಾರಸ್ಸು ಮಾಡಿದ ಭಾರತ ಸರ್ಕಾರದ ಮಾಜಿ ಸಚಿವರೂ,
ಲೋಕಸಭಾ ಸದಸ್ಯರೂ, ಹಿರಿಯ ಮುತ್ಸದ್ಧಿಗಳೂ ಆದ

## ಶ್ರೀ ಜಿ.ಎಂ. ಸಿದ್ದೇಶ್ವರ

ಅವರಿಗೂ ಮತ್ತು ದಾವಣಗೆರೆ ಜಿಲ್ಲಾ ಮಾಜಿ ಉಸ್ತುವಾರಿ
ಸಚಿವರೂ, ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕರೂ,
ಹಿರಿಯ ಮುತ್ಸದ್ಧಿಗಳೂ ಆದ

## ಶ್ರೀ ಎಸ್.ಎ. ರವೀಂದ್ರನಾಥ್

ಅವರಿಗೂ, ಶ್ರೀಯುತರ ಶಿಫಾರಸ್ಸಿನಂತೆ ನಮ್ಮ ಸಂಸ್ಥೆಗೆ ಸೈಟ್
ಮಂಜೂರಾತಿ ಮಾಡಿಕೊಟ್ಟಿರುವ ದಾವಣಗೆರೆ - ಹರಿಹರ
ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ, ಅಖಿಲ ಭಾರತ
ವೀರಶೈವ ಮಹಾಸಭಾದ ದಾವಣಗೆರೆ ಜಿಲ್ಲಾಧ್ಯಕ್ಷರೂ, ಪ್ರತಿಷ್ಠಿತ
ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್
ನಿರ್ದೇಶಕರೂ ಆಗಿರುವ

## ಶ್ರೀ ದೇವರಮನೆ ಶಿವಕುಮಾರ್

ಅವರಿಗೂ ಮತ್ತು ದೂಡಾ ಸದಸ್ಯರುಗಳಿಗೂ
ಹೃದಯಪೂರ್ವಕ ಕೃತಜ್ಞತೆಗಳು...





**ದೇವರಮನೆ ಶಿವಕುಮಾರ್**
**ಅಧ್ಯಕ್ಷರು, ದಾವಣಗೆರೆ-ಹರಿಹರ**
**ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.**



ಮಾರುತಿರಾವ್ ಘಾಟ್ಗೆ ಲಕ್ಷ್ಮಣ ಬಾತಿ ಚಂದ್ರಶೇಖರ್ ಗೌರಮ್ಮ ವಿ. ಪಾಟೀಲ್

ದೂಡಾ ಸದಸ್ಯರು:

ಅಧ್ಯಕ್ಷರು ಮತ್ತು ಪದಾಧಿಕಾರಿಗಳು
ಹಾಗೂ ಸರ್ವ ಸದಸ್ಯರು
**ಶ್ರೀ ಮಹೇಶ್ವರ ಸ್ವಾಮಿ ಸೇವಾ ಟ್ರಸ್ಟ್, ಬಸಾಪುರ.**

# ಗುರುಗಳು-ಮಠಗಳಿಂದ ದೇಶದ ಪರಂಪರೆ ಉಳಿದಿದೆ

## ಈಶ್ವರೀಯ ವಿಶ್ವವಿದ್ಯಾಲಯದ ಹುಬ್ಬಳ್ಳಿ ವಲಯದ ನಿರ್ದೇಶಕ ರಾಜಯೋಗಿ ಬ್ರಹ್ಮಾಕುಮಾರ ಡಾ. ಬಸವರಾಜ ರಾಜಋಷಿ



ದಾವಣಗೆರೆ, ಫೆ. 24 - ಭಾರತ ಪರಕೀಯರ ದಾಳಿಗೆ ಗುರಿಯಾದರೂ, ತನ್ನ ಪರಂಪರೆಯನ್ನು ಸಹಸ್ರಾರು ವರ್ಷಗಳಿಂದ ಉಳಿಸಿಕೊಂಡು ಬಂದಿದೆ. ಗುರುಗಳು, ಮಠಗಳು ಹಾಗೂ ದೇವ ಸ್ಥಾನಗಳಿಂದಾಗಿ ದೇಶದ ಪರಂಪರೆ ಉಳಿದಿದೆ ಎಂದು ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಹುಬ್ಬಳ್ಳಿ ವಲಯದ ನಿರ್ದೇಶಕ ರಾಜಯೋಗಿ ಬ್ರಹ್ಮಾಕುಮಾರ ಡಾ. ಬಸವರಾಜ ರಾಜಋಷಿ ಹೇಳಿದ್ದಾರೆ.

ಸ್ವತಂತ್ರ ಭಾರತದ ಅಮೃತ ಮಹೋತ್ಸವದ ಅಂಗವಾಗಿ 'ಸಂತ ಮಹಾತ್ಮರ ಅಧ್ಯಾತ್ಮಿಕ ಕೊಡುಗೆ' ವಿಷಯ ಕುರಿತು ಆಯೋಜಿಸಲಾಗಿದ್ದ ಸ್ವಾಮೀಜಿಗಳ ಸಮ್ಮಿಲನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಶಿವಧ್ಯಾನ ಮಂದಿರದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮನುಷ್ಯನಿಗೆ ಅಧ್ಯಾತ್ಮ ಜ್ಞಾನ ಬೇಕು. ಅಂತಹ ಜ್ಞಾನ ಪರಿಮಳವನ್ನು ಭಾರತ ವಿಶ್ವಕ್ಕೆ ನೀಡುತ್ತಾ ಬಂದಿದೆ. ದೇಶದ ಮೇಲೆ ಹಲವು ಬಾರಿ ದಾಳಿ, ಪರಕೀಯರ ಆಡಳಿತ ನಡೆದರೂ ಸಹ ಸಂಸ್ಕೃತಿ ಹಾಳಾಗಲು ಬಿಡಲಿಲ್ಲ ಎಂದವರು ಹೇಳಿದರು.

ಮುಂಬರುವ 2036ರ ವೇಳೆಗೆ ಸ್ವರ್ಣಿಮ ಕಾಲ ಬರಲಿದೆ, ದೇಶ ಸತ್ಯಯುಗ ಕಾಣಲಿದೆ. ದೇವತೆಗಳ ಆಡಳಿತ ಬರುತ್ತದೆ. ನಾವು ನಾಗರಿಕರು ದೇವಮಾನವರಾಗುತ್ತೇವೆ ಎಂದು ರಾಜಋಷಿ ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ದಾವಣಗೆರೆಯ ರಾಮಕೃಷ್ಣ ಮಿಷನ್‌ನ ಕಾರ್ಯದರ್ಶಿ ಸ್ವಾಮಿ ತ್ಯಾಗೀಶ್ವರಾನಂದಜೀ, ಸತ್ಯಯುಗ ಬಂದೇ ಬರುತ್ತದೆ. ಸತ್ಯದಿಂದಲೇ ಶಕ್ತಿ ಬರುವುದರಿಂದ ನಾವು ಸತ್ಯವಂತರಾಗಿ ಇರಬೇಕು. ಅಂತರಂಗ (2ನೇ ಪುಟಕ್ಕೆ)

# ಕೃಷಿಯಲ್ಲಿ ಡ್ರೋನ್ ಬಳಕೆ ಕುರಿತು ಸಂಶೋಧನೆ : ಬಿ.ಸಿ. ಪಾಟೀಲ್

ಬೆಂಗಳೂರು, ಫೆ. 24- ಕೃಷಿಯಲ್ಲಿ ಡ್ರೋನ್ ತಂತ್ರಜ್ಞಾನ ಬಳಕೆ ಸೇರಿದಂತೆ ಕೀಟನಾಶಕ, ಲಘು ಪೋಷಕಾಂಶಗಳು ಮತ್ತು ಬೆಳೆ ಪ್ರಚೋದಕಗಳ ಸಿಂಪಡಣೆ, ಬೆಳೆವಾರು ಬಳಕೆ ಕುರಿತು ಸಂಶೋಧನೆ ನಡೆಸಲು ಅನುಕೂಲವಾಗುವಂತೆ ನೂತನ ಪದ್ಧತಿಗಳನ್ನು ಅಭಿವೃದ್ಧಿ ಪಡಿಸಿ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ವಿಜ್ಞಾನಿಗಳಿಗೆ ಸೂಚಿಸಿದ್ದಾರೆ.

ರೈತರ ಆದಾಯ ದ್ವಿಗುಣಗೊಳಿಸುವಲ್ಲಿ ರಚನೆಯಾಗಿರುವ ಉನ್ನತಾಧಿಕಾರ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೃಷಿ ಕ್ಷೇತ್ರದಲ್ಲಿ ಡ್ರೋನ್ ಬಳಕೆ ಹಾಗೂ ಇನ್ನಿತರೆ ಕೃಷಿ ಅಭಿವೃದ್ಧಿ ಸಂಬಂಧ ವಿಜ್ಞಾನಿಗಳ ತಂಡಗಳನ್ನು ರಚನೆ ಮಾಡಲು ಕೃಷಿ ವಿಶ್ವವಿದ್ಯಾಲಯಗಳು ಯೋಜನಾ ವರದಿ ನೀಡುವಂತೆ ತಿಳಿಸಿದರು.

ರೈತರ ಆದಾಯ ದ್ವಿಗುಣಗೊಳಿಸಲು ಸೆಕೆಂಡರಿ ಕೃಷಿಗೆ ಒತ್ತು ನೀಡುವುದರ ಜೊತೆಗೆ, ಸೆಕೆಂಡರಿ ಕೃಷಿ ಕುರಿತು ರಾಜ್ಯದ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಲ್ಲಿರುವ ನೂತನ ತಾಂತ್ರಿಕತೆಗಳನ್ನು ಒಂದೇ ಸೂರಿನಡಿ ರೈತರಿಗೆ ಲಭ್ಯವಾಗುವಂತೆ ಇನ್ನು ಬೇಷನ್ ಕೇಂದ್ರಗಳ ಮೂಲಕ ರೈತರಿಗೆ ಮಾಹಿತಿ/ತರಬೇತಿ ನೀಡಲು ತಿಳಿಸಲಾಯಿತು.

ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಲಭ್ಯವಿರುವ ರೈತಸ್ನೇಹಿ ಆದಾಯ ಹೆಚ್ಚಿಸುವ ಸಂಶೋಧನೆಗಳನ್ನು ತಂತ್ರಾಂಶದಲ್ಲಿ ಅಳವಡಿಸಿ ಎಲ್ಲರಿಗೂ ಲಭ್ಯವಾಗುವಂತೆ ಮಾಡುವುದು. ಭಾಗವಹಿಸಿದ್ದ ಕೃಷಿ ಪಂಡಿತ ಪ್ರಶಸ್ತಿ ವಿಜೇತ ರೈತರಿಂದ ಸ್ಥಳೀಯವಾಗಿ ಲಭ್ಯವಿರುವ ವಿವಿಧ ಸೆಕಂಡರಿ ಕೃಷಿ ಉದ್ಯಮಗಳ ಕುರಿತು ಮಾಹಿತಿ ಪಡೆಯಲಾಯಿತು. (2ನೇ ಪುಟಕ್ಕೆ)

# ಮದ್ಯದ ದರ ಹೆಚ್ಚಳವಿಲ್ಲ

**ಸಚಿವ ಗೋಪಾಲಯ್ಯ**

ಬೆಂಗಳೂರು, ಫೆ. 24- ಮದ್ಯದ ದರ ಹೆಚ್ಚಳದ ಪ್ರಸ್ತಾವ ಸರ್ಕಾರದ ಮುಂ ದಿಲ್ಲ ಎಂದು ಅಬಕಾರಿ ಸಚಿವ ಕೆ.ಗೋಪಾಲಯ್ಯ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾರ್ಚ್ 4 ರಂದು ವಿಧಾನಸಭೆಯಲ್ಲಿ ತಮ್ಮ ಚೊಚ್ಚಲ ಮುಂಗಡ ಪತ್ರ ಮಂಡಿಸಲಿದ್ದಾರೆ. ಅದಕ್ಕೂ ಮುನ್ನ ಅಬಕಾರಿ ಸಚಿವರ ಈ ಹೇಳಿಕೆ ಪಾನಪ್ರಿಯರಿಗೆ ಒಂದಷ್ಟು ನೆಮ್ಮದಿ ತರಲಿದೆ. ಕಳೆದ 10 ವರ್ಷಗಳ ಅವಧಿಯಲ್ಲಿ ಮುಂಗಡ ಪತ್ರ ಮಂಡಿಸಿದ ಸಿದ್ದರಾಮಯ್ಯ, ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಎಲ್ಲರೂ ಆರ್ಥಿಕ ಸಂಪನ್ಮೂಲಕ್ಕಾಗಿ ಮದ್ಯದ ದರ ಹೆಚ್ಚಳ ಮಾಡಿದ್ದರು.

ಈ ಅವಧಿಯಲ್ಲಿ ಮದ್ಯದ ದರ ಶೇ. 600 ರಿಂದ ಶೇ.700ರಷ್ಟು ಹೆಚ್ಚಳವಾಗಿತ್ತು, ಇದರಿಂದ ಕಂಗೆಟ್ಟ ಪಾನಪ್ರಿಯರಿಗೆ ಅಬಕಾರಿ ಸಚಿವರ ಹೇಳಿಕೆ ಒಂದಷ್ಟು ಸಂತಸ ತರಲಿದೆ.

2022-23 ನೇ ಸಾಲಿನ ರಾಜ್ಯ ಬಜೆಟ್ ಕುರಿತು ವಿಧಾನಸೌಧದಲ್ಲಿಂದು ಮುಖ್ಯಮಂತ್ರಿ ಅವರ ಅಧ್ಯಕ್ಷತೆಯಲ್ಲಿ ನಡೆದ ಇಲಾಖಾವಾರು ಪೂರ್ವಭಾವಿ ಸಭೆಯ ನಂತರ, ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ದರ ಹೆಚ್ಚಳದ ಪ್ರಸ್ತಾಪ ಇಲ್ಲ ಎಂದರು. ಇಲಾಖೆಯ ಹಣಕಾಸಿನ ಪರಿಸ್ಥಿತಿಯನ್ನು ಮುಖ್ಯಮಂತ್ರಿಗಳು ಪರಾಮರ್ಶೆ ಮಾಡಿ, ಕೆಲವು ಸಲಹೆ, ಸೂಚನೆ ನೀಡಿದ್ದಾರಲ್ಲದೆ ಇಲಾಖೆಯ ಅಭಿವೃದ್ಧಿಗೂ ಸಹಕಾರ ನೀಡುವುದಾಗಿ ಭರವಸೆ ನೀಡಿದರು ಎಂದು ತಿಳಿಸಿದರು.

ನಾಳೆ ಹಣಕಾಸು ಇಲಾಖೆಯ ಕಾರ್ಯದರ್ಶಿಗಳು ಮತ್ತು ಮುಖ್ಯಮಂತ್ರಿ ಜೊತೆ ಚರ್ಚೆ ನಡೆಸಿ ಮುಂದಿನ ಕಾರ್ಯಕ್ರಮದ ಬಗ್ಗೆ ಚಿಂತನೆ ನಡೆಸಲಾಗುವುದು. ಇಲಾಖೆಯ ಕೆಲವು ಬೇಡಿಕೆಗಳ ಬಗ್ಗೆಯೂ ಗಮನ ಸೆಳೆಯುವ ಕೆಲಸ ಮಾಡಲಾಗಿದೆ. ಇದಕ್ಕೆ ಅವರು ಬಜೆಟ್‌ನಲ್ಲಿ ಅಥವಾ ಆ ನಂತರ ಸೂಕ್ತವಾಗಿ ಸ್ಪಂದಿಸುವ ಭರವಸೆ ಇದೆ ಎಂದರು.

# ಕುಣೆಬೆಳಕೆರೆಯಲ್ಲಿ ಇಂದು ಮಹಾದ್ವಾರ ಉದ್ಘಾಟನೆ



**ರಂಭಾಪುರಿ ಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವ**

ಮಲೇಬೆನ್ನೂರು ಸಮೀಪದ ಕುಣೆಬೆಳಕೆರೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದ ಮಹಾದ್ವಾರ ಉದ್ಘಾಟನೆ ಹಾಗೂ ಗೋಪುರದ ಕಳಸಾರೋಹಣ ಮತ್ತು ಶ್ರೀಮದ್ ರಂಭಾಪುರಿ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಉತ್ಸವವನ್ನು ಇಂದು ಬೆಳಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಭೋವಿ ಅಂಜಿನಪ್ಪ, ಗ್ರಾಮದ ಮುಖಂಡ ಚನ್ನಪ್ಪ ಗೌಡ್ರು ತಿಳಿಸಿದ್ದಾರೆ. ಇಂದು ಬೆಳಿಗ್ಗೆ 12.30ಕ್ಕೆ ಜರುಗುವ ಜನಜಾಗೃತಿ ಧಾರ್ಮಿಕ ಸಮಾರಂಭದ ದಿವ್ಯ ನೇತೃತ್ವವನ್ನು ಶ್ರೀಮದ್ ರಂಭಾಪುರಿ ಜಗದ್ಗುರುಗಳು ವಹಿಸಲಿದ್ದಾರೆ.

ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಶ್ರೀ ಒಡೆಯರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಶ್ರೀ ವೀರಭದ್ರೇಶ್ವರ ಶಿವಾಚಾರ್ಯ ಸ್ವಾಮೀಜಿ, ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಜಿ.ಎಂ.ಸಿದ್ದೇಶ್ವರ, ಡಾ. ಶಾಮನೂರು ಶಿವಶಂಕರಪ್ಪ ಸಮಾರಂಭ ಉದ್ಘಾಟಿಸಲಿದ್ದು, ಎಸ್. ರಾಮಪ್ಪ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಹೆಚ್.ಎಸ್.ಶಿವಶಂಕರ್, ಬಿ.ಪಿ.ಹರೀಶ್, ಮಹಾಂತೇಶ್ ಬೀಳಗಿ, ಕೆ.ಬಿ. ರಾಮಚಂದ್ರಪ್ಪ, ಸತೀಶ್, ರವಿ ಕುಮಾರ್ ಹಾಗೂ ಮತ್ತಿತರರು ಭಾಗವಹಿಸಲಿದ್ದಾರೆ.




॥ ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ॥ ಶಿವ । ।ಶ್ರೀ ವೀರಭದ್ರೇಶ್ವರ ಸ್ವಾಮಿ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಜಿ॥, ತಾ॥, ಶಿರಮಗೊಂಡನಹಳ್ಳಿ ಗ್ರಾಮದ ವಾಸಿ

**ಶ್ರೀ ದೊಡ್ಡಹಾಲಪ್ಪ ಡಿ.ಎಂ. ವೀರೇಂದ್ರ ಪಾಟೀಲ್‌ರವರು ಮತ್ತು ಮಕ್ಕಳು**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ: 22.02.2022ರ ಮಂಗಳವಾರ ಮಧ್ಯಾಹ್ನ 1.30ಕ್ಕೆ ನಮ್ಮ ಪೂಜ್ಯ ಮಾತೃಶ್ರೀಯವರಾದ

**ಶ್ರೀಮತಿ ದೊಡ್ಡಹಾಲಪ್ಪ ಮೀನಾಕ್ಷಮ್ಮನವರು**

(ದಿ॥ ಶ್ರೀ ದೊಡ್ಡಹಾಲಪ್ಪ ಮಹೇಶ್ವರಪ್ಪ ಧರ್ಮಪತ್ನಿ)

ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ 26.02.2022ನೇ ಶನಿವಾರ ಬೆಳಿಗ್ಗೆ 11 ಗಂಟೆಗೆ ಶಿರಮಗೊಂಡನಹಳ್ಳಿ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು**

ಶ್ರೀಮತಿ ರತ್ನಮ್ಮ ಮತ್ತು ಶ್ರೀ ಎಸ್.ಎ. ರವೀಂದ್ರನಾಥ್,
ಶಾಸಕರು ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ ಮತ್ತು ಸಹೋದರರು
ಶ್ರೀಮತಿ ಸುಧಾ ವೀರೇಂದ್ರ ಪಾಟೀಲ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರು
ಡಿ.ಎಂ. ವೀರೇಂದ್ರ ಪಾಟೀಲ್ ಮತ್ತು ಮಕ್ಕಳು, ಮೊಮ್ಮಕ್ಕಳು
ಹಾಗೂ ಅಜ್ಜಪ್ಪ ವಂಶಸ್ಥರು, ದೊಡ್ಡಹಾಲಪ್ಪ ವಂಶಸ್ಥರು ಶಿರಮಗೊಂಡನಹಳ್ಳಿ

ಇಂದ: ಡಿ.ಎಂ. ವೀರೇಂದ್ರ ಪಾಟೀಲ್ ಮತ್ತು ಮಕ್ಕಳು,
ಶಿರಮಗೊಂಡನಹಳ್ಳಿ ದಾವಣಗೆರೆ ತಾ॥, ಜಿ॥ ಮೊ: 94496 49650, 97319 68465




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte